MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 23 | ಶುಕ್ರವಾರ : 07-11-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 23 | FRIDAY : 07-11-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಮತಗಳ್ಳತನ ಸಹಿ ಸಂಗ್ರಹ ಅಭಿಯಾನದಲ್ಲಿ ಪಾಲ್ಗೊಳ್ಳದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ವಜಾ: ಡಿಕೆಶಿ ಎಚ್ಚರಿಕೆ

**ಬೆಂಗಳೂರು, ನ.6–** ಮತಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಿ ಸಂಗ್ರಹ ಅಭಿಯಾನದಲ್ಲಿ ಕೆಲಸ ಮಾಡದೇ ಇರುವ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನು ನಿರ್ಧಾಕ್ಷಿಣ್ಯವಾಗಿ ವಜಾಗೊಳಿಸಲಾಗುವುದು ಹಾಗೂ ಶಾಸಕರ ವಿರುದ್ಧ ಕೂಡ ಹೈಕಮಾಂಡ್‌ಗೆ ವರದಿ ನೀಡುವುದಾಗಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೊಂದು ಗಂಭೀರ ವಾದ ವಿಚಾರ. ರಾಹುಲ್ ಗಾಂಧಿ ಅವರು ನಿನ್ನೆ ದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಹರಿಯಾಣದ ಮತಗಳ್ಳತನವನ್ನು ದಾಖಲೆ ಸಹಿತ ಬಹಿರಂಗ ಪಡಿಸಿದ್ದಾರೆ. ಕರ್ನಾಟಕದಲ್ಲೂ ಮತಗಳ್ಳತನವಾಗಿರುವ ಉದಾಹರಣೆಗಳಿವೆ ಎಂದರು.

ಮತಗಳ್ಳತನದ ವಿರುದ್ಧ ಸಹಿ ಸಂಗ್ರಹ ಅಭಿಯಾನ ನಡೆಯುತ್ತಿದೆ. ರಾಜ್ಯ ಹಾಗೂ ದೇಶಾದ್ಯಂತ ಸಂಗ್ರಹಿಸಿರುವ ಸಹಿಗಳನ್ನು ಇದೇ 9 ರಂದು ದೆಹಲಿಗೆ ತರಲಾಗುವುದು. ಅದನ್ನು ಎಐಸಿಸಿ ಕ್ರೋಢೀಕರಿಸಿ ಪಕ್ಷದ ವರಿಷ್ಠರು ಚುನಾವಣಾ ಆಯೋಗಕ್ಕೆ ಸಲ್ಲಿಸಲಿದ್ದಾರೆ ಎಂದರು.

ಎಐಸಿಸಿಯ ಮುಖಂಡರು ನಿನ್ನೆ ರಾತ್ರಿ ಕೂಡ ಝೂಮ್ ಮೀಟಿಂಗ್‌ನಲ್ಲಿ ಸಭೆ ನಡೆಸಿ, ಮತಗಳ್ಳತನ ಪ್ರಕರಣದಲ್ಲಿ ಕೆಲಸ ಮಾಡದೇ ಇರುವವರನ್ನು ಮುಲಾಜಿಲ್ಲದೆ, ಸಮಯಕೊಡದೆ ವಜಾಗೊಳಿಸಿ ಎಂದಿದ್ದಾರೆ.

ಶಾಸಕರು, ಸಚಿವರ ಬಗ್ಗೆ ಪಕ್ಷಕ್ಕೆ ವರದಿ ನೀಡಿ ಎಂದು ಸೂಚಿಸಲಾಗಿದೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನು ವಜಾಗೊಳಿಸಲು ನನಗೆ ಅಧಿಕಾರವಿದೆ, ಕ್ರಮತೆಗೆದುಕೊಳ್ಳುತ್ತೇನೆ. ಕೆಲವು ಶಾಸಕರು ಕೆಲಸ ಮಾಡಿಲ್ಲ, ಅವರ ಬಗ್ಗೆ ಮುಖ್ಯಮಂತ್ರಿ ಅವರಿಗೆ ಮಾಹಿತಿ ನೀಡಲಾಗುವುದು. ಅನಂತರವೂ ಎಚ್ಚೆತ್ತುಕೊಳ್ಳದೇ ಹೋದರೆ ಪಕ್ಷ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದರು.ಕರ್ನಾಟಕದಲ್ಲಿ ಇಲ್ಲಿವರೆಗೂ ಸುಮಾರು 80 ಲಕ್ಷ ಸಹಿ ಸಂಗ್ರಹವಾ ಗಿದೆ. ಚುನಾವಣಾ ಆಯೋಗ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರು ದೇವರಿದ್ದಂತೆ. ಅವರಿಗೆ ವಿಷಯ ತಿಳಿಸುತ್ತೇವೆ ಎಂದರು.ಬೆಂಗಳೂರು ಗ್ರಾಮಾಂತರ ಲೋಕಾಸಭಾ ಕ್ಷೇತ್ರಕ್ಕೆ ಒಳಪಡುವ ಕನಕಪುರ ಮತ್ತು



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಗಳಲ್ಲಿ ಏನಾ ಗಿದೆ ಎಂದು ಗೊತ್ತಿದೆ. ಸೋಲಾಗಿರುವುದರಿಂದ ಆ ಕ್ಷೇತ್ರದ ಬಗ್ಗೆ ಚರ್ಚೆ ಮಾಡುವುದು ಸೂಕ್ತವಲ್ಲ, ಕೆಲವು ಕಡೆ ಬೂತ್ ಏಜೆಂಟರ್‌ಗಳೇ ಇರಲಿಲ್ಲ ಎಂದರು.ಕರ್ನಾಟಕವಷ್ಟೆ ಅಲ್ಲ, ಮಹಾರಾಷ್ಟ್ರ, ಹರಿಯಾಣ ಬೇರೆ ಬೇರೆ ರಾಜ್ಯಗಳಲ್ಲೂ ಮತಗಳ್ಳತನವಾಗಿದೆ. ಒಂದೊಂದೇ ಕ್ಷೇತ್ರಗಳಿಂದಲೂ ಮಾಹಿತಿಯನ್ನು ತಂದುಕೊಡು ತ್ತಿದ್ದಾರೆ ಎಂದು ಹೇಳಿದ್ದಾರೆ.

ಕಾವೇರಿ ನದಿ ವಿವಾದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಪೀಠ ಸ್ಥಾಪಿಸುವುದಾಗಿ ಸುಪ್ರಿಂಕೋರ್ಟ್ ಹೇಳಿದೆ. ಅದಕ್ಕಾಗಿ ಗುರುವಾರ ಸಮಯ ನೀಡಲಾಗಿದೆ. ಕರ್ನಾಟಕಕ್ಕೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದರು.ಸರಕಾರಿ ಸ್ವತ್ತುಗಳಲ್ಲಿ ಖಾಸಗಿ ಸಂಘ ಸಂಸ್ಥೆಗಳ ಚಟವಟಿ ಕೆಗಳು ನಡೆಯಬೇಕಾದರೆ ಅನುಮತಿ ಪಡೆಯ ಬೇಕೆಂದು ಸಂಪುಟದಲ್ಲಿ ತೀರ್ಮಾನಿಸಲಾಗಿತ್ತು. ಹಿಂದಿನ ಜಗದೀಶ್ ಶೆಟ್ಟರ್ ಅವರ ಸರ್ಕಾರದ ಆದೇಶವನ್ನೆ ಪುನರ್ ಜಾರಿಗೊಳಿಸಿದ್ದೇವೆ. ಎಲ್ಲಿಯೂ ಆರ್‌ಎಸ್‌ಎಸ್ ಹೆಸರನ್ನು ಉಲ್ಲೇಖಿಸಿಲ್ಲ. ಈ ವಿಚಾರವಾಗಿ ಹೈಕೋರ್ಟ್ ತೀರ್ಪಿನಿಂದ ಸರ್ಕಾರಕ್ಕೆ ಹಿನ್ನೆಡೆಯಾಗಿದೆ ಎಂದು ಭಾವಿಸಬೇಕಿಲ್ಲ. ಕಾನೂನು ತಜ್ಞರ ತಂಡ ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತದೆ ಎಂದು ಹೇಳಿದರು.

## ಭ್ರಷ್ಟಚಾರ ನಿರ್ಮೂಲನೆಗೆ ಎಲ್ಲರೂ ಕೈ ಜೋಡಿಸಬೇಕು: ರವಿ ಪುರುಷೋತ್ತಮ್ ಸಂದೇಶ

ಯುವ ಮಾರ್ಗ ಸುದ್ದಿ



**ಮಾನ್ವಿ,ನ.6–**ಬಾಷುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ ಮತ್ತು ಕರ್ನಾಟಕ ಲೋಕಾಯುಕ್ತ, ರಾಯಚೂರು ಇವರ ಜಂಟಿ ಆಶ್ರಯದಲ್ಲಿ ಭ್ರಷ್ಟಾಚಾರ ವಿರೋಧಿ ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಕರ್ನಾಟಕ ಲೋಕಾಯುಕ್ತ, ರಾಯಚೂರಿನ ಉಪಾ ಅಧೀಕ್ಷಕರುಗಳಾದ ರವಿ ಪುರುಷೋತ್ತಮ್ ಅವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ, ತಾವುಗಳು ಭವಿಷ್ಯದಲ್ಲಿ ಸರ್ಕಾರದ ಉನ್ನತ ಹುದ್ದೆಗಳನ್ನು ಪಡೆಯುವ ಸಾಧ್ಯತೆ ಇರುವುದರಿಂದ, ಆ ಸಂದರ್ಭದಲ್ಲಿ ಲಂಚ ಕೊಡುವುದು ಮತ್ತು ಲಂಚ ಸ್ವೀಕರಿಸುವುದು ಈ ಎರಡೂ ಕೃತ್ಯಗಳು ತಪ್ಪಿವೆ ಎಂಬುದರ ಅರಿವು ಮೂಡಿಸುವುದೇ ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಕಾಳಪ್ಪ ಬಡಿಗೇರ್, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ರಾಯಚೂರು ಅವರು ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲಿ ಓದಿನ ಜೊತೆಗೆ ಶಿಸ್ತು ಕಾಪಾಡಿಕೊಳ್ಳುವುದು, ದೇಶಕ್ಕಾಗಿ ಹೋರಾಟಕ್ಕೆ ಸಿದ್ಧರಾಗುವುದು ಮತ್ತು ಸಮಾಜದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವುದು ಅತ್ಯಗತ್ಯ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಜೆ. ಎಲ್. ಈರಣ್ಣ ಅವರು ಅಧ್ಯಕ್ಷತೆ ವಹಿಸಿ, ನಮ್ಮ ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಗತಿಗೆ ಭ್ರಷ್ಟಾಚಾರವು ಒಂದು ಮಾರಕವಾಗಿದೆ ಎಂದು ಅಭಿಪ್ರಾಯಪಟ್ಟರು ಮತ್ತು ಭ್ರಷ್ಟಾಚಾರ ನಿರ್ಮೂಲನೆಗಾಗಿ ಎಲ್ಲರೂ ಒಟ್ಟಾಗಿ ಕೈಜೋಡಿಸಬೇಕೆಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಸಿಬ್ಬಂದಿ ಕಾರ್ಯದರ್ಶಿಗಳಾದ ಡಾ. ಮಿನಾಜ್ಹುಲ್ ಹಸನ್, ಐಕ್ಯೂಎಸಿ ಸಂಚಾಲಕರಾದ ಶಶಿಧರ್ ಎಸ್ ಹಾಗೂ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಡಾ. ಚನ್ನಬಸವ ರವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭದಲ್ಲಿ ಸಾಂಸ್ಕೃತಿಕ ಘಟಕದ ಸಂಚಾಲಕರು ನಿರೂಪಣೆ ನೆರವೇರಿಸಿದರು, ಇಂಗ್ಲಿಷ್ ವಿಷಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಸಯ್ಯದ್ ಮುಜಿಬ್ ಅಹ್ಮದ್ ಸ್ವಾಗತ ಭಾಷಣ ಮಾಡಿದರು, ಭೌತಶಾಸ್ತ್ರ ವಿಷಯದ ಸಹಾಯಕ ಪ್ರಾಧ್ಯಾಪಕರಾದ ಕುಮಾರಿ ಹರ್ಷಿತಾ ಅವರು ಪ್ರಾರ್ಥನಾ ಗೀತೆ ಹಾಡಿದರು, ಮತ್ತು ಕನ್ನಡ ವಿಷಯದ ಸಹಾಯಕ ಪ್ರಾಧ್ಯಾಪಕರಾದ ಶ್ರೀಚಂದ್ರ ಅವರು ವಂದನಾರ್ಪಣೆ ನೆರವೇರಿಸಿದರು.

## ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಬಹುಮಾನಗಳ ವಿತರಣೆ

ಯುವ ಮಾರ್ಗ ಸುದ್ದಿ

**ಮಾನ್ವಿ,ನ.6–**ಪಟ್ಟಣದ ಬೆಟ್ಟದ ಗವಿಯಲ್ಲಿ ಶ್ರೀಹಠಯೋಗಿ ಅನ್ನಮಯ್ಯ ತಾತನವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಯುವಕರು ಉತ್ಸಹದಿಂದ ಭಾಗವಹಿಸಿದರು. ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಬಹುಮನಗಳನ್ನು ವಿತರಿಸಿ ರಾಜಾ ಮಹೇಂದ್ರ ನಾಯಕ ಮಾತನಾಡಿ, ಕಣ್ಮರೆಯಾಗುತ್ತಿರುವ ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನವನ್ನು ನೀಡುವುದಕ್ಕೆ ಹಾಗೂ ಯುವಕರಲ್ಲಿ ಸಾಹಸ ಪ್ರವೃತ್ತಿಯನ್ನು ಬೆಳೆಸುವ ಉದ್ದೇಶದಿಂದ ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯನ್ನು ಅಯೋಜಿಸಲಾಗಿದೆ ಎಂದು ತಿಳಿಸಿದರು.



110 ಕೆಜಿ ಸಂಗ್ರಾಣಿ ಕಲ್ಲು ಎತ್ತುವ ಮೂಲಕ ಪ್ರಥಮ ಸ್ಥಾನ ಪಡೆದ ಪ್ರತಾಪ್ ನಾಗರದೊಡ್ಡಿ ರವರಿಗೆ 11 ತೊಲೆ ಬೆಳ್ಳಿ ಕಡಗವನ್ನು ವಿತರಿಸಲಾಯಿತು. 105 ಕೆಜಿ ಕಲ್ಲು ಎತ್ತುವ ಮೂಲಕ ದ್ವಿತೀಯ ಸ್ಥಾನ ಪಡೆದ ಮಹೆಬೂಬ್ ರವರಿಗೆ ಹಿರೇಬಾದರದಿನ್ನಿ ಗ್ರಾ.ಪಂ. ಸದಸ್ಯ ಕರಿಲಿಂಗಪ್ಪ 6 ತೊಲೆ ಬೆಳ್ಳಿ ಕಡಗ ನೀಡಿದರು. ತೃತೀಯ ಬಹುಮಾನ 4 ತೊಲೆ ಬೆಳ್ಳಿ ಕಡಗವನ್ನು ಫಣೀಂದ್ರ ನೀಡಿದರು

### ರಾಯಚೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ವಿಶೇಷ ಕಾರ್ಯಕ್ರಮ

## ಬೇಡವಾದ ಎರಡು ಕಂದಮ್ಮಗಳಿಗೆ ಸಂಭ್ರಮದಿಂದ ಶಾಸ್ತ್ರೋಕ್ತವಾಗಿ ನಾಮಕರಣ

ಯುವ ಮಾರ್ಗ ಸುದ್ದಿ



**ರಾಯಚೂರು,ನ.6–**ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮತ್ತು ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳ ಸಹಯೋಗದಲ್ಲಿ ಸರ್ಕಾರಿ ದತ್ತು ಸಂಸ್ಥೆಯ ಎರಡು ಕಂದಮ್ಮಗಳಿಗೆ ನಾಮಕರಣ ಕಾರ್ಯಕ್ರಮವು ನವೆಂಬರ್ 06ರಂದು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು.

ಎರಡು ತಿಂಗಳ ಹಿಂದೆ ಕಲ್ಮಲ ಗ್ರಾಮದ ಹತ್ತಿರ ರಸ್ತೆ ಪಕ್ಕದಲ್ಲಿ ಸಿಕ್ಕಿದ್ದ ಪರಿತ್ಯಕ್ತ ಗಂಡು ಮಗುವನ್ನು ಹಾಗೂ ದೇವದುರ್ಗ ತಾಲೂಕಿನ ಗೋಪಾಲಪುರ ಗ್ರಾಮದ ಹತ್ತಿರ ಸಿಕ್ಕಿದ್ದ ಪರಿತ್ಯಕ್ತ ಹೆಣ್ಣು ಹೆಣ್ಣು ಮಗುವನ್ನು ಸಾರ್ವಜನಿಕರ ಸಹಕಾರದಿಂದ ರಕ್ಷಿಸಿ ಸದ್ಯಕ್ಕೆ ಸರ್ಕಾರಿ ದತ್ತು ಸ್ವೀಕಾರ ಕೇಂದ್ರದಲ್ಲಿ ಮಕ್ಕಳು ಪಾಲನೆ ಮತ್ತು ಪೋಷಣೆ ಮಾಡಲಾಗುತ್ತಿದ್ದು, ಈ ಎರಡು ಮಕ್ಕಳಿಗೆ ನಾಮಕರಣ ಕಾರ್ಯಕ್ರಮವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಮಕ್ಕಳ ಪಾಲನಾ ಕೇಂದ್ರಗಳ ಅಧೀಕ್ಷಕರು ಮತ್ತು ಸಿಬ್ಬಂದಿ ಅತ್ಯಂತ ಸಂಭ್ರಮದಿಂದ ನೆರವೇರಿಸಿದರು.

ಎಲ್ಲಾ ಸಿಬ್ಬಂದಿಯು ತಮ್ಮ ಮನೆಯ ಕಾರ್ಯಕ್ರಮದಂತೆ ಹಬ್ಬದ ರೀತಿಯಲ್ಲಿ ಹೊಸ ಉಡುಗೆ ಧರಿಸಿ ಆಗಮಿಸಿದ್ದರು. ದತ್ತು ಕೇಂದ್ರವನ್ನು ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಸಿಬ್ಬಂದಿಯು ನಾಮಕರಣದ ಹಾಡುಗಳನ್ನು ಹೇಳಿದರು.

ಈ ವೇಳೆ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಅಮರೇಶ್ ಹಾವಿನ ಅವರು ಮಕ್ಕಳಿಗೆ ನಾಮಕರಣ ಮಾಡಿದರು. ಯಾರೇ ಸಾರ್ವಜನಿಕರು ಮಕ್ಕಳು ತಮಗೆ ಬೇಡವದಲ್ಲಿ ಅಂತ ಮಕ್ಕಳನ್ನು ಮಕ್ಕಳ ಸಹಾಯವಾಣಿ 1098 ಗೆ ಕರೆ ಮಾಡುವ ಮೂಲಕ ಅಥವಾ ಮಕ್ಕಳನ್ನು ಮಮತೆಯ ತೊಟ್ಟಿಲಿಗೆ ಹಾಕುವ ಮೂಲಕ ಮಕ್ಕಳನ್ನು ದತ್ತು ಸಂಸ್ಥೆಗೆ ಒಪ್ಪಿಸಬೇಕು. ಯಾವುದೇ ಕಾರಣಕ್ಕೂ ಮಕ್ಕಳನ್ನು ಬಿಸಾಡಬಾರದು ಎಂದು ಸಾರ್ವಜನಿಕರಿಗೆ ಸಲಹೆ ಮಾಡಿದರು. ಮತ್ತು ಮಕ್ಕಳನ್ನು ಕಾನೂನು ಪ್ರಕಾರ ಮಾತ್ರ ದತ್ತು ಪಡೆಯಬೇಕು. ಮಕ್ಕಳ ಅಕ್ರಮ ಮಾರಾಟ ಮತ್ತು ಅಕ್ರಮವಾಗಿ ದತ್ತು ಪಡೆಯುವದು ಕಾನೂನು ಬಾಹಿರ ಅಪರಾಧವಾಗಿದ್ದು ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಸುದರ್ಶನ ಹಾಗೂ ನಿಕಟಪೂರ್ವ ಅಧ್ಯಕ್ಷರಾದ ಮಂಗಳಾ ಹೆಗಡೆ ಹಾಗೂ ಸದಸ್ಯರು ಹಾಗೂ ಬಾಲಕಿಯರ ಬಾಲ ಮಂದಿರದ ಅಧೀಕ್ಷಕಿ ಭಾರತಿ ನಾಯಕ, ರಾಧಾಬಾಯಿ, ಬಾಲಕರ ಬಾಲ ಮಂದಿರದ ಅಧೀಕ್ಷಕ ನಾಗರಾಜ್, ಶೇಖ್ ಮಾಹೇಬೂಬ್ ಹಾಗೂ ಸಿಬ್ಬಂದಿ ಇದ್ದರು.



## ಭ್ರಷ್ಟಾಚಾರ ವಿರೋಧಿ ಜಾಗೃತಿ ಅರಿವು ಸಪ್ತಾಹ –2025

ಯುವ ಮಾರ್ಗ ಸುದ್ದಿ

**ಮಾನ್ವಿ,ನ.6–**ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ಹಾಗೂ ತಾಲೂಕು ಆಡಳಿತ ಸಂಯುಕ್ತಾಶ್ರಯದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಜಾಗೃತಿ ಅರಿವು ಸಪ್ತಾಹ –2025 ಕಾರ್ಯಕ್ರಮಕ್ಕೆ ಕರ್ನಾಟಕ ಲೋಕಾಯುಕ್ತ ರಾಯಚೂರು ಪೊಲೀಸ್ ಅಧೀಕ್ಷಕರಾದ ಸತೀಶ್.ಎಸ್. ಚಿಟಗುಬ್ಬಿ ಚಾಲನೆ ನೀಡಿ ಮಾತನಾಡಿ ಜಿಲ್ಲೆಯಲ್ಲಿ ನ.11 ರವರೆಗೆ ಭ್ರಷ್ಟಾಚಾರ ವಿರೋಧಿ ಜಾಗೃತಿ ಅರಿವು ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಅಧಿಕಾರಿಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರಿಗೆ ಹಾಗೂ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳನ್ನು ಯಾವುದೆ ಫಲಾಪೇಕ್ಷೆ ಇಲ್ಲದೆ ಸಕಾಲದಲ್ಲಿ ಮಾಡಿಕೊಡಬೇಕು. ಸರ್ಕಾರಿ ಇಲಾಖೆಗಳಲ್ಲಿ ನೌಕರರು ಪ್ರಾಮಾಣಿಕವಾಗಿ,ಶ್ರದ್ಧೆಯಿಂದ ಕಾರ್ಯನಿರ್ವಹಿಸಬೇಕು ಸಾರ್ವಜನಿಕರ ಕೇಲಸಗಳನ್ನು ಮಾಡಿಕೊಡುವುದಕ್ಕೆ ಫಲಾಪೇಕ್ಷೆ ಅಪೇಕ್ಷಿಸುವುದು,ಅನಗತ್ಯ ವಿಳಂಬಮಾಡುವುದು, ಲೋಕಯುಕ್ತಕಾಯ್ದೆಯಡಿಯಲ್ಲಿ ಅಪರಾಧವಾಗಿದೆ. ಅದ್ದರಿಂದ ಯಾವುದೇ ಇಲಾಖೆಯ ನೌಕರರು ಸಾರ್ವಜನಿಕರಿಗೆ ವಿಳಂಬವಿಲ್ಲದೆ ಉತ್ತಮವಾದ ಸೇವೆಯನ್ನು



ನೀಡಬೇಕು ತಪ್ಪಿದಲ್ಲಿ ಈ ಕುರಿತು ಸಾರ್ವಜನಿಕರು ಲೋಕಾಯುಕ್ತ ರಾಯಚೂರಿಗೆ ದೂರನ್ನು ನೀಡಿದಲ್ಲಿ ಅಂತಹ ಅಧಿಕಾರಿಗಳ ಮೇಲೆ ಅಗತ್ಯ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ತಹಸೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ತಾಲೂಕಿನ ಎಲ್ಲಾ ಸರ್ಕಾರಿ ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರಿಂದ ಸಕಾಲ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಕಾಲಮಿತಿಯೊಳಗೆ ವಿಲೇವರಿ ಮಾಡಬೇಕು ಕಂದಾಯ ಇಲಾಖೆಯಡಿಯಲ್ಲಿ ಬರುವ ಎಲ್ಲಾ ಸೇವೆಗಳ್ನು ಸಾರ್ವಜನಿಕರಿಗೆ ಶೀರ್ಘವೇ ಕಾಲಮೀತಿಯೊಳಗೆ ನೀಡುವ ಮೂಲಕ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆವೆ ಎಂದು ತಿಳಿಸಿದರು.

ಕರ್ನಾಟಕ ಲೋಕಾಯುಕ್ತ ರಾಯಚೂರು ಪೊಲೀಸ್ ಉಪಾಧೀಕ್ಷಕರಾದ ರವಿ ಪುರುಷೋತ್ತಮ ಅಧಿಕಾರಿಗಳಿಗೆ ಪ್ರತಿಜ್ಞಾವಿಧಿಯನ್ನು ಭೋದಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ರಾಯಚೂರು ಪೊಲೀಸ್ ನಿರೀಕ್ಷಕರಾದ ಕಾಳಪ್ಪ ಬಡಿಗೇರ .ತಾ.ಪಂ.ಇ.ಓ. ಖಾಲೀದ್ ಅಹಮ್ಮದ್ ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್, ತಾ.ಆರೋಗ್ಯಾಧಿಕಾರಿ ಡಾ.ಶರಣಬಸವರಾಜ,ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ. ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದರು.

## ಕಲಾವಿದ ದಂಪತಿಗಳಿಗೆ ಕರುನಾಡ ಕಲಾ ರತ್ನ ಪ್ರಶಸ್ತಿ

**ಕಲಬುರಗಿ,ನ.6–**ಜಿಲ್ಲೆಯ ಅಫಜಲಪೂರ ತಾಲೂಕಿನ ಗೌಡಗಾಂವ ಗ್ರಾಮದ ಗಂಧರ್ವಧಾಮದಲ್ಲಿ ಜರುಗಿದ ಗಾನ ಭುಷಣ ಲಿಂ.ವೇ ರಾಮಲಿಂಗಯ್ಯ ಗವಾಯಿಗಳ ಐದನೆ ಪುಣ್ಯ ಸ್ಮರಣೋತ್ಸವ ಅಂಗವಾಗಿ ಜರುಗಿದ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಚಿನುಮಯಗೀರಿಯ ಸಿದ್ಧರಾಮ ಶಿವಾಚಾರ್ಯರು ಹಾಗೂ ಕಡಕೋಳ ಮಡಿವಾಳೇಶ್ವರ ಮಠದ ಡಾ.ರುದ್ರಮುನಿ ಶಿವಾಚಾರ್ಯರ ಸಮ್ಮುಖದಲ್ಲಿ ಬೀದರಿನ ಕಲಾವಿದ ದಂಪತಿಗಳಾದ ಶ್ರೀಮತಿ ಅಶ್ವಿನಿ ರಾಜಕುಮಾರ ಹಿರೇಮಠ ಅವರಿಗೆ "ಕರುನಾಡ ಕಲಾ ರತ್ನಗಳು" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ರೂವಾರಿ ಶಿವರುದ್ರಯ್ಯ ಗವಾಯಿಗಳು



ಗೌಡಗಾಂವ, ಬಂಡಯ್ಯ ಸ್ವಾಮಿಜೀ ಸುಂಟನೂರ, ಮಡಿವಾಳಯ್ಯ ಶಾಸ್ತ್ರೀ ಗಳು ಜೇರಟಗಿ ಹಾಗೂ ನಾಡಿನ ಅನೇಕ ಕವಿ ಕಲಾವಿದರು ಗೌಡಗಾಂವದ ಜನತೆ ಉಪಸ್ಥಿತರಿದ್ದರು.

## ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಫ್ ವಿತರಣೆ



**ಕಲಬುರಗಿ,ನ.6–** ಬೆಂಗಳೂರಿನ ವಿಶ್ವ ಕಲ್ಯಾಣ ಮಹಾಮನೆ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಫ್ ವಿತರಣೆ ಕಾರ್ಯಕ್ರಮ ನಗರದ ಆರಾಧನಾ ಪದವಿ ಪೂರ್ವ ಕಾಲೇಜಿನಲ್ಲಿ ಜರುಗಿತು.

2024– 25 ನೇ ಸಾಲಿನ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಬಿಎಪದವಿ ದಾಖಲೆ ಪಡೆದ ಸುರೇಖಾ ವಗ್ಗಾಲಿ, ಶಿವಲೀಲಾ ಭೀಮಶಾ, ಬಿಎಸ್ಸಿ ಫಿಸಿಯೋಥೇರಪಿ ದಾಖಲೆ ಪಡೆದ ಸಾಕ್ಷಿ ತಗಡ್ಕರ್ ಅವರಿಗೆ ಸಂಸ್ಥೆಯ ಅಧ್ಯಕ್ಷ ಶ್ರೀಶೈಲ ಮಸೂತೆ ಸ್ಕಾಲರ್ ಶಿಫ್ ವಿತರಣೆ ಮಾಡಿದರು. ಅದರ ಜೊತೆಗೆ ಪದವಿ ಶಿಕ್ಷಣದ ಮೂರು ವರ್ಷದ ವೆಚ್ಚವನ್ನು ವಿಶ್ವಕಲ್ಯಾಣ ಮಹಾಮನೆ ಚಾರಿಟೇಬಲ್ ಟ್ರಸ್ಟ್ ನವರು ವಹಿಸಿಕೊಂಡಿದ್ದಾರೆ ಎಂದು ಹೇಳಿ, ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿಗಳು ಜೀವನದಲ್ಲಿ ಸಾಧನೆ ಮಾಡಬೇಕೆಂದಾದಲ್ಲಿ ನಾವು ಮೊದಲು ದೇಶಭಕ್ತರಾಗಬೇಕು, ದೇಶಭಕ್ತರಾಗದಲ್ಲಿ ಮಾತ್ರ ಎಲ್ಲರೂ ಸಮಾನರಂತೆ ಕಾಣುತ್ತಾರೆ ನಮ್ಮ ಮೇಲೆ ನಮಗೆ ನಂಬಿಕೆ ಇರಬೇಕು ಮಾನಸಿಕವಾಗಿ ಮೊದಲು ನಾವು ಸಿದ್ಧರಾಗಬೇಕು ಶಿಕ್ಷಣದಲ್ಲಿ ಅಂಕಗಳ ಜೊತೆಗೆ ಜ್ಞಾನ ಪಡೆಯುವುದು ಅತಿ ಮುಖ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಚೇತನ್ ಕುಮಾರ್ ಗಾಂಗಜಿ ಅವರು ವಹಿಸಿದ್ದರು, ಕಾರ್ಯಕ್ರಮದ ಸಂಚಾಲನೆಯನ್ನು ಕಾಶಿನಾಥ ಪಾಟೀಲ್ ನಡೆಸಿಕೊಟ್ಟರು. ಅರ್ಪಿತ ಪಾಟೀಲ್ ಸ್ವಾಗತ ಕೋರಿದರು.ವಂದನಾರ್ಪಣೆಯನ್ನು ದೈಹಿಕ ಶಿಕ್ಷಕ ರೇವಣಸಿದ್ದಪ್ಪ ಇವಣಿ ನಡೆಸಿಕೊಟ್ಟರು.

## ಸೈಬರ್ ವಂಚನೆ:31.64 ಲಕ್ಷ ರೂ ಕಳೆದುಕೊಂಡ ಔಷಧಿ ವ್ಯಾಪಾರಿ

**ಕಲಬುರಗಿ,ನ.6–** ಹೆಚ್ಚಿನ ಹಣದ ಲಾಭ ಆಮಿಷವೊಡ್ಡಿದ ಸೈಬರ್ ವಂಚಕರು ಔಷಧಿ ವ್ಯಾಪಾರಿಗೆ 31.64 ಲಕ್ಷ ರೂ ವಂಚನೆ ಮಾಡಿದ ಘಟನೆ ನಗರದಲ್ಲಿ ಜರುಗಿದೆ.ಶಿವಾಜಿ ನಗರದ ನಿವಾಸಿ ಶರಣಬಸಪ್ಪ ರಾಚಣ್ಣ ಮೈದರಗಿ ವಂಚನೆಗೊಳಗಾದ ವ್ಯಕ್ತಿ.

ನುವಾಮಾ ವೆಲ್ತ್ ಮ್ಯಾನೇಜಮೆಂಟ್ ಲಿಮಿಡೆಡ್ ಎಂಬ ನಕಲಿ ಶೇರ್ ಮಾರುಕಟ್ಟೆ ಕಂಪನಿಯ ಆಪ್ ಮತ್ತು ವಾಟ್ಸಪ್ ಗುಂಪು ರಚಿಸಿದ 6 ಜನ ವಂಚಕರು ನಿಗದಿತ ಬ್ಯಾಂಕ್ ಖಾತೆಗೆ ಹಂತಹಂತವಾಗಿ ಹಣ ಜಮಾ ಮಾಡುವಂತೆ ಶರಣಬಸಪ್ಪ ಅವರಿಗೆ ನಂಬಿಸಿದ್ದರು.ನಂತರ ಲಾಭ ನೀಡದೇ ಠೇವಣಿ ಮಾಡಿದ ಹಣ ನೀಡದೇ ಸಂಪರ್ಕ ಕಡಿತಗೊಳಿಸಿದ್ದರು.

ಈ ಕುರಿತು ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸೌಹಾರ್ದತೆಯ ಸಂಕೇತವೇ ಗುರುನಾನಕ ಜಯಂತಿ: ಡಾ.ಬಲಬೀರಸಿಂಗ್



**ಬೀದರ, ನ.6–**ಶಾಂತಿ ಸೌಹಾರ್ದತೆಯ ಹರಿಕಾರರಾದ ಸಿಖ್ ಧರ್ಮದ ಧರ್ಮಗುರುಗಳಾದ ಶ್ರೀ ಗುರುನಾನಕ ದೇವ್ ಅವರ 556ನೇ ಜಯಂತಿ ಮಹೋತ್ಸವ ನಗರದ ಗುರುದ್ವಾರದಲ್ಲಿ ಭಕ್ತಿ ಸಂಭ್ರಮದ ಮಧ್ಯೆ ಜರುಗಿತು. ಸಿಖ್ ಸಮುದಾಯದ ಯುವಕರು ಶೌರ್ಯದ ಸಂಕೇತವಾದ ಖಡ್ಗವನ್ನು ಹಿಡಿದು ಓಡಿದ್ದು ವಿಶೇಷವಾಗಿತ್ತು. ನಗರದ ಗುರುದ್ವಾರದ ಸಮೀಪದಲ್ಲಿರುವ ಸರ್ದಾರ್ ಜೋಜಾಸಿಂಗ್ ಉದ್ಯಾನವನದಿಂದ ಮಹಾದ್ವಾರದ ಮೂಲಕ ಅಕ್ಕಮಹಾದೇವಿ ಕಾಲೇಜುವರೆಗೆ ಖಡ್ಗವನ್ನು ಮೇಲೆತ್ತಿ ಹಿಡಿದು ಓಡಿದರು. ಎಲ್ಲೆಡೆ ಗುರುದ್ವಾರವನ್ನು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಸುಮಾರು ಮೂರು ದಿವಸಗಳ ಕಾಲ ನಡೆದ ಈ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನರು ಲಂಗರ್ ಪ್ರಸಾದವನ್ನು ಸ್ವೀಕಾರ ಮಾಡಿದ್ದಾರೆ. ಇದು ನಮ್ಮ ಪ್ರತಿದಿನದ ಕಾರ್ಯವಾಗಿದೆ ಎಂದು ಗುರುನಾನಕ ಪ್ರಬಂಧಕ ಕಮಿಟಿಯ ಅಧ್ಯಕ್ಷರಾದ ಸರ್ದಾರ್ ಡಾ. ಬಲಬೀರಸಿಂಗ್ ಅವರು ತಿಳಿಸಿದರು. ಈ ಕುರಿತು ನಗರದಲ್ಲಿ ಮಾತನಾಡಿದ ಅವರು ಜಯಂತಿ ಉತ್ಸವಕ್ಕೆ ಹಲವು ರಾಜ್ಯಗಳಿಂದ ಸಿಖ್ ಬಾಂಧವರು ಆಗಮಿಸಿದ್ದಾರೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡಿದ ಡಾ. ಬಲಬೀರ್ ಸಿಂಗ್ ಅವರು ಪಂಜಾಬ್, ಮಹಾರಾಷ್ಟ್ರದ ನಾಂದೇಡ್, ತೆಲಂಗಾಣ ಸೇರಿದಂತೆ ಹಲವು ರಾಜ್ಯಗಳಿಂದ ಸುಮಾರು 25 ಸಾವಿರಕ್ಕೂ ಹೆಚ್ಚು ಸಿಖ್ ಬಾಂಧವರು ಜಯಂತಿ ಮಹೋತ್ಸವಕ್ಕೆ ಆಗಮಿಸಿದ್ದಾರೆ. ಭಜನೆ, ಸಂಗೀತ, ಪೂಜೆ, ಪ್ರಾರ್ಥನೆ, ಮೆರವಣಿಗೆ, ಲಂಗರ್ ಪ್ರಸಾದ ಜಯಂತಿ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿದೆ. ಶಾಂತಿಯುತವಾಗಿ ಜಯಂತಿ ಆಚರಣೆಗೆ ಸಹಕಾರ ನೀಡಿದ ಜಿಲ್ಲಾಡಳಿತಕ್ಕೂ, ಪೊಲೀಸ್ ಇಲಾಖೆಗೂ ಹಾಗೂ ಪ್ರಚಾರಗೈದ ಮಾಧ್ಯಮದವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಮುಖಂಡರಾದ ಸರ್ದಾರ್ ಪುನೀತ್‌ಸಿಂಗ್ ಅವರು ಮಾತನಾಡುತ್ತ "ಗುರುನಾನಕ ದೇವ್ ಅವರ ಜಯಂತಿ ಉತ್ಸವಕ್ಕೆ ಕೇವಲ ಸಿಖ್ ಬಾಂಧವರು ಮಾತ್ರವಲ್ಲದೆ ಎಲ್ಲಾ ಧರ್ಮಿಯರು ಪ್ರೀತಿಯಿಂದ ಜಯಂತಿಯಲ್ಲಿ ಭಾಗವಹಿಸುತ್ತಾರೆ. ಇದು ನಮ್ಮ ಬೀದರ ಜಿಲ್ಲೆಯ ಸೌಹಾರ್ದತೆಗೆ ಸಾಕ್ಷಿಯಾಗಿದೆ. ರಾಜಕೀಯರಹಿತವಾಗಿ, ಪಕ್ಷಾತೀತವಾಗಿ ಮತ್ತು ಧರ್ಮಾತೀತವಾಗಿ ಆಚರಣೆ ಮಾಡುವುದೇ ಗುರುನಾನಕ ದೇವ್ ಅವರ ಜಯಂತಿಯ ಆಕರ್ಷಣೆಯಾಗಿದೆ ಎಂದು ಹೇಳಿದ್ರು.

## ಕರವೇ ನೂತನ ಪದಾಧಿಕಾರಿಗಳು ಆಯ್ಕೆ:ಶಾಲಾ ಮಕ್ಕಳಿಗೆ ಪೆನ್ನು ಪುಸ್ತಕ ವಿತರಣೆ



**ಯುವ ಮಾರ್ಗ ಸುದ್ದಿ**

**ದೇವದುರ್ಗ,ನ.6–** 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ವತಿಯಿಂದ ಕೋಣಚಪ್ಪಳಿ ಗ್ರಾಮದಲ್ಲಿ ಧ್ವಜಾರೋಹಣ ನೆರವೇರಿಸಿ ಬಳಿಕ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ತಾಲೂಕು ಅಧ್ಯಕ್ಷ ಬಸವರಾಜ ಗೋಪಾಳಪುರ ಮಾತನಾಡಿ, ಶಾಲೆಯ ಮಕ್ಕಳು ಕಡ್ಡಾಯವಾಗಿ ಓದುವ ಹವ್ಯಾಸ ಬೆಳಸಿಕೊಳ್ಳಿ, ವಿದ್ಯಾರ್ಥಿಗಳು ಮೊಬೈಲ್ ಬಳಕೆ ಕಡಿಮೆ ಮಾಡಿ ವಿದ್ಯಾಭ್ಯಾಸದ ಕಡೆಗೆ ಒತ್ತು ನೀಡಬೇಕು ,ಎಂದರು ನಂತರ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾದ ಎಲ್ಲ ನನ್ನ ಸಂಘಟನೆಯ ಪದಾಧಿಕಾರಿಗಳು ಕನ್ನಡ ನಾಡು, ನುಡಿಯ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿ ಕನ್ನಡ ಭಾಷೆಗೆ ಹೆಚ್ಚಿನ ಜವಾಬ್ದಾರಿ ನೀಡಬೇಕು ಎಂದು ಸಲಹೆ ನೀಡಿದರು. ನಾಗರಾಜ ಇವರನ್ನು ಗ್ರಾಮ ಘಟಕದ ಅಧ್ಯಕ್ಷರನ್ನಾಗಿ ಇನ್ನು ಪ್ರಧಾನ ಕಾರ್ಯದರ್ಶಿಯನ್ನು ಸಿದ್ರಾಮ, ಹಾಗೂ ಶರಣಬಸವ , ಸಂಘಟನೆ ಕಾರ್ಯದರ್ಶಿ ನಾಗಲಿಂಗ, ಗೌರವಾಧ್ಯಕ್ಷ ಮಲ್ಲಪ್ಪ ಅಂಬಿಗೇರ, ಖಜಾಂಚಿ ವೆಂಕಟೇಶ್, ಹಾಗೂ ಹೋಬಳಿ ಅಧ್ಯಕ್ಷ ಶರಣಬಸವ, ಉಪಾಧ್ಯಕ್ಷ ಹನುಮಂತ್ರಾಯ ಹೂಗಾರ, ಕಾರ್ಯದರ್ಶಿ ಭೀಮರಾಯ, ಮೌನೇಶ್, ಶಿವಪ್ಪ, ವೆಂಕಟೇಶ್,ರಂಗಪ್ಪ ಮನೋಹರ್, ರವಿಕುಮಾರ್ ಇದ್ದರು.

## ಅತಿವೃಷ್ಟಿಯಿಂದ 10,000ಕ್ಕೂ ಹೆಚ್ಚು ಕುಟುಂಬ ಸಂಕಷ್ಟದಲ್ಲಿವೆ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು



**ಆಳಂದ,ನ.6–**ತಾಲ್ಲೂಕಿನ ಕಬ್ಬು ಬೆಳೆಗಾರರು ಇತ್ತೀಚಿನ ಅತಿವೃಷ್ಟಿಯಿಂದ ಭಾರೀ ಸಂಕಷ್ಟದಲ್ಲಿದ್ದಾರೆ. ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸುರಿದ ಅತಿವೃಷ್ಟಿಯಿಂದ 3,588 ಹೆಕ್ಟೇರ್ ಕಬ್ಬು ಬೆಳೆ ಹಾನಿಗೊಂಡು, 10,000ಕ್ಕೂ ಹೆಚ್ಚು ಕುಟುಂಬಗಳು ಸಾಲದ ಬಲೆಗೆ ಸಿಲುಕಿಕೊಂಡಿವೆ ಎಂದು ಆಳಂದ ಮಂಡಲ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ನಾಗರಾಜ ಶೇಗಜಿ ಧಂಗಾಪೂರ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಈ ಪರಿಸ್ಥಿತಿಯಲ್ಲಿ ಭೂಸನೂರದ ಎನ್‌ಎಸ್‌ಎಲ್ ಸಹಕಾರಿ ಸಕ್ಕರೆ ಕಾರ್ಖಾನೆ ರೈತರ ಜೀವನಕ್ಕೆ ಆಶಾಕಿರಣವಾಗಿದೆ. ಆದರೆ ರೈತರ ಬೆವರಿನ ಬೆಲೆ ಕಾಣದೆ ಕಾರ್ಖಾನೆ ಪ್ರತಿ ಟನ್ ಕಬ್ಬಿಗೆ ನ್ಯಾಯ ಸಮ್ಮತ ದರ ನೀಡದಿರುವುದು ತುಂಬಾ ವಿಷಾದನೀಯ. ರೈತರ ಪ್ರತಿ ಟನ್ ಕಬ್ಬಿಗೆ ಕನಿಷ್ಠ ?3,500 ದರ ನಿಗದಿ ಮಾಡಬೇಕು ಎಂಬ ಒತ್ತಾಯವನ್ನು ಮುಂದಿಟ್ಟಿದ್ದಾರೆ.

ನರೇಂದ್ರ ಮೋದಿಜಿ ನೇತೃತ್ವದ ಕೇಂದ್ರ ಸರ್ಕಾರ ಶೇ.10.25 ಇಳುವರಿ ಆಧಾರದ ಮೇಲೆ ರೂ.3,550 ಎಫ್‌ಆರ್‌ಪಿ ನಿಗದಿ ಮಾಡಿದೆ. ಆದರೆ ಕರ್ನಾಟಕದಲ್ಲಿ ಸರಾಸರಿ ಇಳುವರಿ ಶೇ.9.5 ಮಾತ್ರ ಇದರ ಆಧಾರದ ಮೇಲೆ ಎಫ್‌ಆರ್‌ಪಿ ಪರಿಷ್ಕರಣೆ ಮಾಡಿದಾಗ ಮಾತ್ರ ರೈತನಿಗೆ ಲಾಭ ಸಿಗುತ್ತದೆ. ಕರ್ನಾಟಕ ಕಬ್ಬು ನಿಯಂತ್ರಣ ಮಂಡಳಿಯು ಈ ಪರಿಷ್ಕರಣೆಗೆ ತಕ್ಷಣ ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಈಗಾಗಲೇ ನವೆಂಬರ್ 1ರಿಂದ ಕಬ್ಬು ನುರಿಯುವ ಹಂಗಾಮು ಆರಂಭಗೊಂಡಿದ್ದು, ಸೋಲಾಪುರದ ಸಿದ್ದೇಶ್ವರ, ಲೋಕಮಂಗಲ, ಸಿದ್ದನಾಥ, ಜೈನ್ ಸಕ್ಕರೆ ಕಾರ್ಖಾನೆಗಳು ರೈತರಿಗೆ ರೂ3,500ಕ್ಕೂ ಹೆಚ್ಚು ದರ ನೀಡುತ್ತಿವೆ. ಸಾಗಣೆ ವೆಚ್ಚ ಪಡೆಯದೇ ನೇರವಾಗಿ ಕಬ್ಬು ಖರೀದಿಸುತ್ತಿವೆ. ಇದರಿಂದ ಅಫಜಲಪುರ ಮತ್ತು ಆಳಂದ ತಾಲ್ಲೂಕಿನ ಕಬ್ಬು ಮಹಾ ರಾಷ್ಟಕ್ಕೆ ಸಾಗುತ್ತಿದೆ.

ಇದರ ಪರಿಣಾಮ ರಾಜ್ಯ ಸರ್ಕಾರಕ್ಕೆ ಕೋಟ್ಯಂತರ ತೆರಿಗೆ ನಷ್ಟವಾಗುತ್ತಿದೆ ಮತ್ತು ಸ್ಥಳೀಯ ಕಾರ್ಖಾನೆಗಳು ಪೈಪೋಟಿಯಲ್ಲಿ ಹಿನ್ನಡೆಯುತ್ತಿವೆ ಎಂದು

ಆಳಂದ ತಾಲ್ಲೂಕಿನಲ್ಲಿ ಕಳೆದ ಕೆಲ ದಶಕಗಳಲ್ಲಿ ಸುರಿದ ಅತ್ಯಧಿಕ ಮಳೆಯಿಂದಾಗಿ 1,279 ಹೆಕ್ಟೇರ್ ಕಬ್ಬು ಮತ್ತು 2.9 ಲಕ್ಷ ಹೆಕ್ಟೇರ್ ಇತರ ಬೆಳೆಗಳು ಹಾನಿಗೊಂಡು ರೂ.500 ಕೋಟಿ ರೂಪಾಯಿಗಳಷ್ಟು ಆರ್ಥಿಕ ನಷ್ಟ ಉಂಟಾಗಿದೆ. ಈ ಪರಿಸ್ಥಿತಿಯಲ್ಲಿ ರೈತನ ಕಣ್ಣೀರು ಒರೆಸುವ ಕೆಲಸ ಸರ್ಕಾರದ ಕರ್ತವ್ಯವಾಗಬೇಕಿದೆ ಎಂದು ಹೇಳಿದ್ದಾರೆ.

ಎನ್‌ಎಸ್‌ಎಲ್ ಕಾರ್ಖಾನೆಯು ತಕ್ಷಣ ಪ್ರತಿ ಟನ್ ಕಬ್ಬಿಗೆ ರೂ3,500 ದರ ನಿಗದಿ ಮಾಡಬೇಕು. ಶೇ.9.5 ಇಳುವರಿ ಆಧಾರದಲ್ಲಿ ಎಫ್‌ಆರ್‌ಪಿ ಪರಿಷ್ಕರಿಸಬೇಕು. ಮಳೆ ನಷ್ಟಕ್ಕೆ ರೈತರಿಗೆ ಕನಿಷ್ಠ ?25,000 ಪ್ರತಿ ಎಕರೆ ಪರಿಹಾರ ನೀಡಬೇಕು. ಕಬ್ಬು ನಿಯಂತ್ರಣ ಮಂಡಳಿಯಲ್ಲಿನ ಹಿತಾಸಕ್ತಿಗಳನ್ನು ತೊಡೆದು, ಪಾರದರ್ಶಕ ನೀತಿ ತರಬೇಕು. ರೈತನ ಬೆವರು ಈ ದೇಶದ ನಾಡಿ ಅವನಿಗೆ ನ್ಯಾಯ ಸಿಗದೆ ಇದ್ದರೆ, ಆಳಂದದ ರೈತರ ಕಣ್ಣೀರಿನ ಶಾಪ ರಾಜ್ಯ ಸರ್ಕಾರಕ್ಕೆ ಹಾಗೂ ಪಟ್ಟಭದ್ರ ಹಿತಾಸಕ್ತಿಗಳಿಗೆ ತಟ್ಟದೇ ಇರುವದಿಲ್ಲ. ಆದ್ದರಿಂದ ರಾಜ್ಯ ಸರ್ಕಾರವು ತಕ್ಷಣ ರೈತರ ಧ್ವನಿಗೆ ಸ್ಪಂದಿಸಲಿ ಇಲ್ಲವಾದಲ್ಲಿ ಮಾಜಿ ಶಾಸಕರಾದ ಸುಭಾಷ್ ಆರ್ ಗುತ್ತೇದಾರ, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಹರ್ಷಾ ಎಸ್ ಗುತ್ತೇದಾರ ಹಾಗೂ ಬಿಜೆಪಿ ಆಳಂದ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಕಂದಗೂಳೆ ನೇತೃತ್ವದಲ್ಲಿ ರೈತರೊಂದಿಗೆ ಬೃಹತ್ ಹೋರಾಟ ಹಮ್ಮಿಕೊಂಡು ರೈತರ ಪಾಲಿನ ಹಕ್ಕಿಗಾಗಿ ಬೀದಿಗಿಳಿಯಲಿದ್ದೇವೆ ಎಂದು ಎಚ್ಚರಿಸಿದ್ದಾರೆ.

## ವಿದ್ಯಾರ್ಥಿಗಳಲ್ಲಿ ತಂಬಾಕು ಮುಕ್ತ ಜೀವನದ ಪ್ರತಿಜ್ಞೆ



**ಯಾದಗಿರಿ,ನ.6–** ಜಿಲ್ಲೆಯ ಭೀಮರಾಯನಗುಡಿಯಲ್ಲಿನ ಕೃಷಿ ಮಹಾವಿದ್ಯಾಲಯದಲ್ಲಿ ಬಿ. ಎಸ್ಸಿ. (ಕೃಷಿ) ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ದೀಕ್ಷಾರಂಭ ಕಾರ್ಯಕ್ರಮದಡಿಯಲ್ಲಿ ತಂಬಾಕು ಸೇವನೆಯಿಂದ ಉಂಟಾಗುವ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಹಾನಿ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಧೂಮಪಾನ ವಿರೋಧಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಸಲಹೆಗಾರರಾದಮಹಾಲಕ್ಷ್ಮಿ ಅವರು ಉದ್ಘಾಟಿಸಿ ಮಾತನಾಡಿದರು. ತಂಬಾಕು ಸೇವನೆಯು ಕೇವಲ ವ್ಯಕ್ತಿಯ ಆರೋಗ್ಯಕ್ಕಷ್ಟೇ ಅಲ್ಲದೆ ಕುಟುಂಬ ಮತ್ತು ಸಮಾಜದ ಮೇಲೆಯೂ ಕೆಟ್ಟ ಪರಿಣಾಮ ಬೀರುತ್ತದೆ ಎಂದು ತಿಳಿಸಿದರು. ಯುವಕರು ತಂಬಾಕು ವ್ಯಸನದಿಂದ ದೂರವಿದ್ದು ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಂತರ ಸಲಹೆಗಾರ ವಿಜಯಕುಮಾರ, ಮಾತನಾಡಿ ವಿದ್ಯಾರ್ಥಿಗಳು ತಂಬಾಕು ಸೇವನೆಯಿಂದ ಉಂಟಾಗುವ ಅಪಾಯಗಳನ್ನು ಅರಿತು, ಇತರರಿಗೂ ಅದರ ಬಗ್ಗೆ ತಿಳಿಸಬೇಕೆಂದು ಹೇಳಿದರು. "ತಂಬಾಕು ಮುಕ್ತ ಕ್ಯಾಂಪಸ್" ಎಂಬ ಗುರಿಯೊಂದಿಗೆ ಕಾಲೇಜು ಮುಂದಿನ ದಿನಗಳಲ್ಲಿ ವಿವಿಧ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ಅವರು ತಿಳಿಸಿದರು.ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಒಟ್ಟಾಗಿ ವಚನ ತೆಗೆದುಕೊಂಡರು.ದೀಕ್ಷಾರಂಭದ ಸಹ–ಸಂಯೋಜಕ ಡಾ. ಶರಣ ಭೂಪಾಲ ರೆಡ್ಡಿಯವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು

# ಎಸ್.ಎಂ.ಜನವಾಡಕರ ಬದುಕು ಬರಹ: ವಿಶೇಷ ಉಪನ್ಯಾಸ



**ಬೀದರ,ನ.6–** ನಗರದ ಸಿದ್ಧಾರ್ಥ ಪದವಿ ಪೂರ್ವ ಕಾಲೇಜಿನಲ್ಲಿ ಎಸ್.ಎಂ.ಜನವಾಡಕರ ಅವರ ಬದುಕು ಬರಹ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಿದ್ಧಾರ್ಥ ಪ.ಪೂ.ಕಾಲೇಜಿನ ಪ್ರಾಚಾರ್ಯ ಡಾ.ಎಸ್. ಪ್ರಭು ಉದ್ಘಾಟಿಸಿ ಮಾತನಾಡುತ್ತಾ ಮಕ್ಕಳಲ್ಲಿ ಓದುವ ಹವ್ಯಾಸ ಕಡಿಮೆ ಯಾಗಿದ್ದು, ಅದನ್ನು ಹೆಚ್ಚಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಹೇಳಿದರು. ವಿದ್ಯಾರ್ಥಿಗಳು ಮೊಬೈಲ್‌ನ್ನು ಬಿಟ್ಟು ಪುಸ್ತಕಗಳನ್ನು ಓದಬೇಕು, ಇತರೆ ಸಾಹಿತಿಗಳ ಬಗ್ಗೆ ಮಾಹಿತಿ ಮಾಡಿಕೊಳ್ಳಬೇಕು ಎಂದರು. ಮುಖ್ಯ ಅತಿಥಿ ಕಥೆಗಾರ ಗುರುನಾಥ ಅಕ್ಕಣ್ಣ ಮಾತನಾಡುತ್ತಾ ಕತೆ, ಕಾವ್ಯ, ಹಾಸ್ಯ ಪ್ರಬಂಧ ಎಲ್ಲಾ ಸಾಹಿತ್ಯಗಳನ್ನು ತಿಳಿದುಕೊಳ್ಳಬೇಕು ಸಾಹಿತ್ಯದ ಗಂಧವನ್ನು ಮಕ್ಕಳಿಗೆ ಉಣಬಡಿಸಬೇಕು. ಆಡಂಬರವನ್ನು ನಿಲ್ಲಿಸಿ ಸಾಹಿತಿಗಳ ಸಾಹಿತ್ಯವನ್ನು ಓದುವಂತೆ ಅರ್ಥಮಾಡಿಕೊಳ್ಳಬೇಕೆಂದು ನುಡಿದರು. ಚುಟುಕು ಸಾಹಿತಿ ಪುಷ್ಪ ಕನಕ ಚುಟುಕುಗಳ ಮೂಲಕ ಹಾಸ್ಯವನ್ನು ಮಕ್ಕಳಿಗೆ ಉಣಬಡಿಸುತ್ತ ಗುರುವಂದನೆಯನ್ನು ಸಲ್ಲಿಸಿದರು. ಗುರುಗಳ ಬಗ್ಗೆ ಗೌರವದ ಮಾತನಾಡಿ ಇಂತಹ ಗುರುಗಳಿಂದ ಉನ್ನತ ಸ್ಥಾನಕ್ಕೆ ಬಂದಿರುವ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು. ಯುವ ಸಾಹಿತಿ ಪವನ ಬಾಲೇರ ಎಸ್.ಎಂ ಜನವಾಡಕರ ಅವರ ಬಗ್ಗೆ ಉಪನ್ಯಾಸವನ್ನು ಮಂಡಿಸಿ, ಅವರು ಬರೆದ ಕೃತಿಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಿದರು. ಅತಿಥಿಗಳಾಗಿ ನಾಗಶೆಟ್ಟಿ ಜ್ಯೋತೆಪ್ಪಾ ಮತ್ತು ಗುಂಡಪ್ಪ ಕನಕ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ ಶಬನಮ ಸಂಸ್ಥೆಯ ಡಾ. ಮಕ್ತುಂಬಿಯವರು ಮಾತನಾಡುತ್ತಾ ಸಾಹಿತಿಗಳ ಬಗ್ಗೆ ಪ್ರತಿ ತಿಂಗಳು ಎರಡು ಕಾರ್ಯಕ್ರಮಗಳನ್ನು ಮಾಡುತ್ತಿದ್ದು ಪ್ರತಿಯೊಬ್ಬ ಸಾಹಿತಿಗಳ ಬಗ್ಗೆ ಯುವಜನರಿಗೆ ತಿಳಿಸುವ ಪ್ರಯತ್ನ ನಮ್ಮ ಸಂಸ್ಥೆ ಮಾಡುತ್ತಿದ್ದು, ಇದನ್ನು ಮುಂದುವರೆಸಿಕೊಂಡು ಹೋಗುತ್ತೇವೆ ಎಂದರು.ಕಶೀಷ ಪ್ರಾರ್ಥನೆ ನಡೆಸಿಕೊಟ್ಟರು. ಸುಲೋಚನಾ ನಿರೂಪಿಸಿದರು. ಏಕನಾಥ ಸ್ವಾಗತಿಸಿದರು. ಪ್ರಿಯಾಂಕ ವಂದಿಸಿದರು

# ಇಮೇಲ್ ಮೂಲಕ ಶಾಲೆಗೆ ಬಾಂಬ್ ಬೆದರಿಕೆ ಹಾಕಿದ್ದ ಮಹಿಳಾ ಟೆಕ್ಕಿ ಅರೆಸ್ಟ್



**ಬೆಂಗಳೂರು,ನ.6–** ಇಮೇಲ್ ಐಡಿ ಮುಖಾಂತರ ಶಾಲೆಯೊಂದಕ್ಕೆ ಬಾಂಬ್ ಹಾಕ್ಸ್ (Bomb Hoaxe) ಬೆದರಿಕೆ ಸಂದೇಶ ಕಳುಹಿಸಿದ್ದ ಮಹಿಳಾ ಟೆಕ್ಕಿಯನ್ನು ಉತ್ತರ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ. ರೆನೆಜೋಶಿಲ್ಡಾ ಬಂಧಿತ ಸಾಫ್ಟ್ ವೇರ್ ಇಂಜಿನಿಯರ್.

ಕಲಾಸಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಪಬ್ಲಿಕ್ ಶಾಲೆಯೊಂದರ ಇಮೇಲ್ ಐಡಿಗೆ ಜೂ.14ರಂದು ರಾತ್ರಿ 10.15ರ ಸುಮಾರಿನಲ್ಲಿ ಇಮೇಲ್ ಸಂದೇಶ ಬಂದಿತ್ತು. ಶಾಲಾ ಪ್ರಾಂಶುಪಾಲರು ಸಂದೇಶ ಗಮನಿಸಿ ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದರು.

ನಗರದಲ್ಲಿ ದಾಖಲಾಗಿರುವ ಇತರೆ ಹುಸಿಬಾಂಬ್ ಕರೆಗಳ ಪ್ರಕರಣಗಳನ್ನು ಉತ್ತರ ವಿಭಾಗದ ಸೈಬರ್ ಕ್ರೈಂನ ಸಹಾಯಕ ಪೊಲೀಸ್ ಆಯುಕ್ತರನ್ನು ಮುಖ್ಯ ತನಿಖಾಧಿಕಾರಿಯಾಗಿ ಮತ್ತು ಸೈಬರ್ ಕ್ರೈಂ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರನ್ನು ಸಹಾಯಕ ತನಿಖಾಧಿಕಾರಿಯಾಗಿ ಪ್ರಕರಣಗಳನ್ನು ಸೈಬರ್ ಕ್ರೈಂಗೆ ವರ್ಗಾಯಿಸಿ ತನಿಖೆ ಕೈಗೊಳ್ಳಲು ನಗರ ಪೊಲೀಸ್ ಆಯುಕ್ತರು ಸೂಚಿಸಿದ್ದರು.

ತನಿಖೆ ಮುಂದುವರೆಸಿದ್ದ ಸೈಬರ್‌ಕ್ರೈಂ ಪೊಲೀಸರು ಇಮೇಲ್ ಐಡಿ ಮೂಲಕ ಬೆದರಿಕೆವೊಡ್ಡಿದ್ದ ಮಹಿಳೆಯನ್ನು ಗುಜರಾತ್ ರಾಜ್ಯದ ಅಹಮದಾಬಾದ್ ನಗರದ ಕೇಂದ್ರ ಕಾರಾಗೃಹದಿಂದ ಬಾಡಿವಾರಂಟ್ ಮೂಲಕ ವಶಕ್ಕೆ ಪಡೆದುಕೊಂಡು ವಿಚಾರಣೆ ಮಾಡಿದಾಗ, ಈ ಪ್ರಕರಣವೂ ಸೇರಿದಂತೆ ನಗರದ ಇತರೆ 6 ಪ್ರಕರಣಗಳಲ್ಲಿ ಭಾಗಿಯಾಗಿರುವುದು ಗೊತ್ತಾಗಿದೆ.

ಆರೋಪಿತೆ ಸಾಫ್ಟ್ ವೇರ್ ಇಂಜಿನಿಯರ್ ಉದ್ಯೋಗಿಯಾಗಿದ್ದು, ಈಗಾಗಲೇ ಈಕೆ ವಿರುದ್ಧ ಗುಜರಾತ್, ಮೈಸೂರು, ತಮಿಳುನಾಡಿನ ಚೆನ್ನೈನಲ್ಲಿಯೂ ಹುಸಿಬಾಂಬ್ ಕರೆಗಳ ಪ್ರಕರಣಗಳು ದಾಖಲಾಗಿರುವ ಬಗ್ಗೆ ತನಿಖೆಯಿಂದ ತಿಳಿದುಬಂದಿರುತ್ತದೆ.

ಈಕೆ ತನ್ನ ಡಿವೈಎಸ್‌ಗಳಿಗೆ ವಿಪಿಎನ್ ಇಂಟರ್‌ನೆಟ್ ಬಳಕೆ ಮಾಡುತ್ತಿದ್ದು, ಗೇಟ್‌ಕೋಡ್ ಎಂಬ ಅಪ್ಲಿಕೇಷನ್ ಮೂಲಕ ವರ್ಚ್ಯೂಯಲ್ ಮೊಬೈಲ್ ನಂಬರ್‌ಗಳನ್ನು ಪಡೆದುಕೊಂಡು ಸುಮಾರು ಆರೇಳು ವಾಟ್ಸಾಪ್ ಖಾತೆಗಳನ್ನು ಬಳಕೆ ಮಾಡುತ್ತಿರುವ ಬಗ್ಗೆ ತನಿಖೆಯಿಂದ ತಿಳಿದುಬರುತ್ತದೆ.

ಆರೋಪಿತೆಯನ್ನು ತೀವ್ರ ವಿಚಾರಣೆಗೊಳಪಡಿಸಿ ಪುನಃ ಆಕೆಯನ್ನು ಗುಜರಾತ್‌ನ ಅಹಮದಾಬಾದ್ ನಗರದ ಕೇಂದ್ರ ಕಾರಾಗೃಹಕ್ಕೆ ವಾಪಸ್ ಕಳುಹಿಸಲಾಗಿದೆ. ಉತ್ತರ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಪವನ್, ಇನ್‌ಸ್ಪೆಕ್ಟರ್ ಮಂಜು ಹಾಗೂ ಸಿಬ್ಬಂದಿ ತಂಡ ಪ್ರಕರಣವನ್ನು ಬೇಧಿಸುವಲ್ಲಿ ಯಶಸ್ವಿಯಾಗಿದೆ.

# ಏಕಾಗ್ರತೆ ಮತ್ತು ನಾವು

ಅತ್ಯಂತ ಚೂಟಿ ಮತ್ತು ಲವಲವಿಕೆಯಿಂದ ಓಡಾಡಿಕೊಂಡಿದ್ದ ಪುಟ್ಟ ಬಾಲಕನನ್ನು ಆತನ ಪಾಲಕರು ಶಾಲೆಗೆ ಸೇರಿಸಿದರು. ಎಲ್ಲ ವಿಷಯಗಳನ್ನು ಹೇಳಿದ ಕೂಡಲೇ ಕಲಿಯುತ್ತಿದ್ದ ಬಾಲಕ ಮನೆ ಪಾಠ ಕೊಟ್ಟರೆ ಮಾತ್ರ ಮಾಡುತ್ತಲೇ ಇರಲಿಲ್ಲ. ಶಿಕ್ಷಕರು ನಿಧಾನವಾಗಿ ಬುದ್ಧಿ ಹೇಳಿದರು ಗದರಿದರು ಬೈದರು ಕೊನೆಗೆ ಕಠಿಣ ಶಿಕ್ಷೆ ವಿಧಿಸಿದರು, ಆದರೂ ಬಾಲಕ ಬದಲಾಗಲೇ ಇಲ್ಲ, ಪಾಲಕರ ಪ್ರಯತ್ನಗಳು ಕೂಡ ನಿಷ್ಫಲವಾದಾಗ ಬಾಲಕ ಎಲ್ಲರ ಅನಾದರಕ್ಕೆ ಪಾತ್ರನಾದನು.

ಇದೀಗ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದ ಆತನಿಗೆ ಶಾಲೆಯಲ್ಲಿ ಅಷ್ಟೇನು ಒಳ್ಳೆಯ ಅಂಕಗಳು ದೊರಕುತ್ತಿರಲಿಲ್ಲ. ಓದುವಾಗ ಆಟವಾಡುವ ಆಸೆ, ಆಟವಾಡುವಾಗ ಕೀಟಲೆ ಮಾಡುವ ಚಟ, ಕೀಟಲೆ ಮಾಡುವಾಗ ಮತ್ತಿನ್ನೇನ್ನೋ ಯೋಚನೆಯಲ್ಲಿ ಬಿದ್ದು ಓದುವುದನ್ನು ಮರೆಯುವ ಆತನ ಅಭ್ಯಾಸದಿಂದಾಗಿ ಆತ ಕಲಿಕೆಯಲ್ಲಿ ಹಿಂದೆ ಬಿದ್ದಿದ್ದ... ಚಂಚಲ ಚಿತ್ರ ಆತನದಾಗಿತ್ತು.


ಅದೆಷ್ಟೇ ಕಷ್ಟಪಟ್ಟು ಓದಲು ಆತ ಕುಳಿತುಕೊಂಡರೂ ಕೂಡ ಕೆಲವೇ ನಿಮಿಷಗಳಲ್ಲಿ ಆತ ಓದಿನಿಂದ ವಿಮುಖನಾಗಿ ಮೊಬೈಲ್ ನಲ್ಲಿ ಆಟವಾಡುತ್ತಲೋ, ರೀಲ್ಸ್ ನೋಡುತ್ತಲೋ, ಕಾಲ ಕಳೆಯಲು ಆರಂಭಿಸುತ್ತಿದ್ದ.

ಇದು ಆತನ ಪಾಲಕರನ್ನು ಚಿಂತೆಗೀಡು ಮಾಡಿತ್ತು. ಆತನ ತಂದೆ ಮಗನನ್ನು ಕುರಿತು ನೋಡು ಮಗು, ನಿನ್ನ ಮನಸ್ಸು ಕಡಿವಾಣವಿಲ್ಲದ ಹುಚ್ಚು ಕುದುರೆಯಂತೆ ಎತ್ತ ಬೇಕೆಂದರತ್ತ ಓಡುತ್ತದೆ. ನೀನು ಈಗ ಅದಕ್ಕೆ ಮೂಗುದಾರ ಹಾಕಿ ಒಂದೆಡೆ ನಿಲ್ಲಿಸದೆ ಹೋದರೆ ಮುಂದೆ ಕಷ್ಟಗಳು ನಿನ್ನನ್ನು ಕಾಡುತ್ತವೆ. ಕೊನೆಗೊಂದು ದಿನ ನೀನು ಅದೆಷ್ಟೇ ಪಶ್ಚಾತಾಪ ಪಟ್ಟರು ಕೂಡ ಬದುಕಿನಲ್ಲಿ ಈ ದಿನಗಳು ಮತ್ತೆ ಮರಳಿ ಬರಲಾರವು ಎಂದು ಸಾಕಷ್ಟು ಬುದ್ಧಿ ಹೇಳಿದರು. ತಂದೆಯ ಮಾತುಗಳು ಕೂಡ ಬಾಲಕನ ಕಿವಿಗೆ ಹೋಗಲಿಲ್ಲ.

ಹೀಗೆಯೇ ದಿನಗಳು ಕಳೆದು ಅದೊಂದು ದಿನ ಊರಿಗೆ ಬಂದ ಹಿರಿಯ ಸ್ವಾಮೀಜಿ ಒಬ್ಬರ ಬಳಿ ತಂದೆ ಮಗನನ್ನು ಕರೆದೊಯ್ದರು. ಅಪ್ಪ ಮಗ ಇಬ್ಬರೂ ಸ್ವಾಮೀಜಿಯವರ ಕಾಲಿಗೆ ನಮಸ್ಕರಿಸಿದರು. ಮುಖದಲ್ಲಿ ಮಂದಹಾಸವನ್ನು ಸೂಸಿದ ಗುರುಗಳು ಅವರಿಗೆ ಆಶೀರ್ವದಿಸಿ ಬಂದ ಕಾರಣವನ್ನು ಕೇಳಿದರು ಮಗನ ಚಂಚಲಚಿತ್ರದ ಕುರಿತು ತಂದೆ ಸಾದ್ಯಂತವಾಗಿ ಸ್ವಾಮೀಜಿಯವರಿಗೆ ವಿವರಿಸಿದನು. ನಿನ್ನ ತಂದೆ ಹೇಳುತ್ತಿರುವುದೆಲ್ಲವೂ ನಿಜವೇ ? ಎಂದು ಸ್ವಾಮೀಜಿಯವರು ಬಾಲಕನನ್ನು ಪ್ರಶ್ನಾರ್ಥಕವಾಗಿ ನೋಡಿದಾಗ ಆತ 'ಹೌದು' ಎಂಬಂತೆ ತಲೆ ತಗ್ಗಿಸಿದ.

ಸಮಸ್ಯೆಗೆ ಕಾರಣ ಏನು? ಎಂಬುದು ಅರಿವಾದರೆ ಅರ್ಧ ಸಮಸ್ಯೆಯೇ ಬಗೆಹರಿಯುತ್ತದೆ ಈಗಾಗಲೇ ನಿನಗೆ ನಿನ್ನ ಸಮಸ್ಯೆಯ ಮೂಲ ಗೊತ್ತಿದೆ, ಆದ್ದರಿಂದ ನಾನು ಆ ಕುರಿತು ಹೆಚ್ಚು ಮಾತನಾಡದೆ ನಿನಗೆ ಒಂದು ಸುಲಭವಾದ ಕೆಲಸವನ್ನು ಕೊಡುತ್ತೇನೆ. ನೀನು ಅದನ್ನು ಮಾಡಬೇಕು ಎಂದು ಹೇಳಿದರು.

ತನ್ನ ಸಮಸ್ಯೆ ಪರಿಹಾರವಾದರೆ ಸಾಕು ಎಂಬ ಭಾವದಲ್ಲಿದ್ದ ಬಾಲಕ ಓಹೋ! ಖಂಡಿತ ಮಾಡುತ್ತೇನೆ ಎಂದು ಮಾತುಕೊಟ್ಟ.



ಹಾಗಾದರೆ ನಾಳೆ ಮುಂಜಾನೆ ನೀನು ನಿನ್ನ ಮನೆಯಿಂದ ಇಲ್ಲಿಗೆ ಬರಬೇಕು. ಹಾಗೆ ಬರುವಾಗ ನಿನ್ನ ಕೈಯಲ್ಲಿ ಒಂದು ನೀರು ತುಂಬಿದ ಲೋಟವನ್ನು ಹಿಡಿದು ತರಬೇಕು ಎಂದು ಹೇಳಿ ಒಂದು ಕ್ಷಣ ತಡೆದ ಅವರು ಒಂದು ಹನಿ ನೀರು ಕೂಡ ಚೆಲ್ಲದಂತೆ ತರಬೇಕು ಎಂದು ಒತ್ತಿ ಹೇಳಿದರು. ಆಯ್ತು ಎಂದು ತಲೆಯಾಡಿಸಿದ ಬಾಲಕನ ಬೆನ್ನು ತಟ್ಟಿ ಕಳುಹಿಸಿದರು.

ಮರುದಿನ ಮುಂಜಾನೆ ದೈನಂದಿನ ವಿಧಿಗಳನ್ನು ಪೂರೈಸಿದ ಬಾಲಕ ಗುರುಗಳು ಜನರನ್ನು ಭೇಟಿಯಾಗುತ್ತಿದ್ದ ಊರ ಹೊರಗಿನ ಮರದ ಬಳಿ ನೀರು ತುಂಬಿದ ಲೋಟದೊಡನೆ ನಡೆದನು. ದಾರಿಯಲ್ಲಿ ಮಕ್ಕಳ ಆಟ, ಕಿರುಚಾಟ, ಓಡಾಟ, ದನ ಕರುಗಳ ಓಡಾಟ, ಜನರ ಮಾತುಕತೆಗಳು, ಪಕ್ಷಿಗಳ ಕಲರವ ಎಲ್ಲ ಶಬ್ದಗಳು ಬಾಲಕನಿಗೆ ಕಿರಿಕಿರಿಯನ್ನು ಉಂಟು ಮಾಡಿದಂತೆ ಭಾಸವಾಗುತ್ತಿತ್ತು. ಕೊನೆಗೂ ಗುರುಗಳ ಬಳಿ ಬಂದು ತಲುಪಿದ ಬಾಲಕನ ಕೈಯಲ್ಲಿದ್ದ ಲೋಟದಲ್ಲಿ ಅರ್ಧ ಮಾತ್ರ ನೀರಿದ್ದು ಅದನ್ನು ನೋಡಿದ ಗುರುಗಳು "ನೋಡಿದೆಯಾ ಮಗು, ಅದೆಷ್ಟೇ ನೀನು ಪ್ರಯತ್ನ ಪಟ್ಟರೂ ಜಗದ ವ್ಯವಹಾರಗಳನ್ನು ನಿಲ್ಲಿಸಲು ಸಾಧ್ಯವಿಲ್ಲ ಹಾಗೆ ನಿಲ್ಲಿಸಲು ಸಾಧ್ಯವಾಗುವುದಾದರೆ ಅದು ನಿನ್ನ ಮನದ ಚಂಚಲತೆಯನ್ನು ಮಾತ್ರ..... ಅದು ನೀನು ಪ್ರಯತ್ನಿಸಿದರೆ ಮಾತ್ರ ನಿನಗೆ ಯಶಸ್ಸು ದೊರೆಯುತ್ತದೆ" ಎಂದು ಗುರುಗಳು ಹೇಳಿದರು. ಇದೀಗ ತನ್ನ ತಪ್ಪಿನ ಸಂಪೂರ್ಣ ಅರಿವಾಗಿದ್ದ ಬಾಲಕ ಗುರುಗಳ ಮಾತಿಗೆ ಸುಮ್ಮನೆ ತಲೆ ಆಡಿಸಿದನಾದರೂ ಆತನ ಮುಖದಲ್ಲಿ ದೃಢ ನಿಶ್ಚಯ ಎದ್ದು ಕಾಣುತ್ತಿತ್ತು.

ಮರುದಿನದಿಂದಲೇ ಆ ಬಾಲಕ ತನ್ನ ಬದುಕಿನಲ್ಲಿ ಶಿಸ್ತನ್ನು ರೂಢಿಸಿಕೊಳ್ಳಲು ಆರಂಭಿಸಿದನು. ಅದೇನೇ ಗಲಾಟೆ, ಗೌಜಿ, ಗದ್ದಲಗಳು ಇದ್ದರೂ ಕೂಡ ತನ್ನ ಪಾಡಿಗೆ ತಾನು ಓದುವ ಬರೆಯುವ ಕೆಲಸಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡ. ಈ ಕೆಲಸ ಅಷ್ಟೇನೂ ಸುಲಭವಾಗಿರಲಿಲ್ಲ ಮೊದಮೊದಲು ಏಕಾಗ್ರತೆಯನ್ನು ಸಾಧಿಸುವುದು ಕಷ್ಟವಾದರೂ ಕೆಲವೇ ತಿಂಗಳುಗಳಲ್ಲಿ ಆತ ತನ್ನನ್ನು ತಾನು ಏಕಾಗ್ರತೆಗೆ ಹೊಂದಿಸಿಕೊಂಡ. ಮೊದಲು ಮನಸ್ಸಿನ ಏಕಾಗ್ರತೆಯನ್ನು ರೂಡಿಸಿಕೊಂಡ ಬಾಲಕನಿಗೆ ನಂತರದ ದಿನಗಳಲ್ಲಿ ಓದಿನಲ್ಲಿ ಕೂಡ ಏಕಾಗ್ರತೆ ಸಿದ್ಧಿಸಿತು.

ಕೆಲ ಅಭ್ಯಾಸಗಳು ಹಾಗೆಯೇ! ಪಟ್ಟು ಬಿಡದೆ ಅವುಗಳನ್ನು ರೂಢಿಸಿಕೊಂಡರೆ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಕೂಡ ಪಾಲನೆ ಮುಂದುವರೆಯುತ್ತದೆ. ಬಾಲಕನ ವಿಷಯದಲ್ಲಿಯೂ ಕೂಡ ಹಾಗೆಯೇ ಆಯಿತು. ಬಾಲಕನ ನಿರಂತರ ಪರಿಶ್ರಮ ಹಾಗೂ ಶ್ರದ್ಧೆಗಳು ಆತನಿಗೆ ಫಲ ನೀಡಿತು

ಶ್ರದ್ಧೆಯಿಟ್ಟು ಆತ ಮಾಡಿದ ಕೆಲಸಗಳಲ್ಲಿ ಯಶಸ್ಸು ದೊರೆಯಿತು, ಜೊತೆಗೆ ಆ ವರ್ಷದ ಶಾಲಾ ಪರೀಕ್ಷೆಗಳಲ್ಲಿ ಆತ ಇಡೀ ತರಗತಿಗೆ ಮೊದಲಿಗನಾಗಿ ಹೊರಹೊಮ್ಮಿದ. ಇದು ಆತನ ಆತ್ಮವಿಶ್ವಾಸವನ್ನು ಹೆಚ್ಚಿಸಿ ಮತ್ತಷ್ಟು ತನ್ನನ್ನು ತಾನು ಓದು ಬರಹ, ಆಟೋಟಗಳಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಯಿತು. ಊರಿನ ಇತರೆ ಮಕ್ಕಳ ಪಾಲಕರು ತಮ್ಮ ಮಕ್ಕಳಿಗೆ ಏಕಾಗ್ರತೆಯ ಪಾಠ ಹೇಳಿಕೊಡಲು ಈ ಪಾಲಕನ ಬಳಿ ಕರೆ ತರುತ್ತಿದ್ದರು.

ಏಕಾಗ್ರತೆ ಹೆಚ್ಚಿಸಲು ದಿನಚರಿಯಲ್ಲಿ ಯೋಗ ಮತ್ತು ಧ್ಯಾನ ಮಾಡುವುದು, ಆರೋಗ್ಯಕರ ಮತ್ತು ಸಮತೋಲಿತ ಆಹಾರ ಸೇವಿಸುವುದು, ವಿರಾಮ ತೆಗೆದುಕೊಳ್ಳುವುದು, ಓದಲು ಶಾಂತ ವಾತಾವರಣವನ್ನು ಸೃಷ್ಟಿಸುವುದು ಅಗತ್ಯ. ಜೊತೆಗೆ ವ್ಯಾಯಾಮ, ಸರಿಯಾದ ನಿದ್ರೆ, ಮತ್ತು ಮನಸ್ಸನ್ನು ವಿಚಲಿತಗೊಳಿಸುವ ಗ್ಯಾಜೆಟ್‌ಗಳಿಂದ ದೂರವಿರುವುದು ಸಹ ಮುಖ್ಯ.

.ವಿಟಮಿನ್ ಇ ಸಮೃದ್ಧವಾಗಿರುವ ಹಣ್ಣುಗಳು ಮತ್ತು ನಟ್ಸ್ ಸೇವಿಸಿ. ನಿರ್ಜಲೀಕರಣವನ್ನು ತಪ್ಪಿಸಲು ಸಾಕಷ್ಟು ನೀರು ಕುಡಿಯಿರಿ.

ಸಾಕಷ್ಟು ನಿದ್ರೆ ಪಡೆಯುವುದು ಏಕಾಗ್ರತೆಗೆ ಬಹಳ ಮುಖ್ಯ.

ನಿಯಮಿತ ವ್ಯಾಯಾಮವು ದೇಹ ಮತ್ತು ಮೆದುಳನ್ನು ಚುರುಕಾಗಿಡುತ್ತದೆ. ಟಿವಿ, ಕಂಪ್ಯೂಟರ್ ಮುಂತಾದ ಅಡ್ಡಿಗಳಿಲ್ಲದ ಶಾಂತವಾದ ಜಾಗದಲ್ಲಿ ಅಧ್ಯಯನ ಮಾಡಬೇಕು.

ಏಕಾಗ್ರತೆಯಿಂದ ಓದಲು ಕುಳಿತುಕೊಳ್ಳಿ ಮತ್ತು ಓದುವ ಗಂಟೆಗಳಲ್ಲಿ ಗ್ಯಾಜೆಟ್‌ಗಳನ್ನು ಬಳಸುವುದನ್ನು ತಪ್ಪಿಸಿ. ದೀರ್ಘಕಾಲ ಓದುವ ಬದಲು ಆಗಾಗ ವಿರಾಮ ತೆಗೆದುಕೊಳ್ಳಿ. ಅಧ್ಯಯನ ಮಾಡುವಾಗ ಯಾವುದೇ ಗೊಂದಲಗಳಿದ್ದರೆ, ಅದನ್ನು ತಕ್ಷಣವೇ ಪರಿಹರಿಸಿಕೊಳ್ಳಬೇಕು.

ಈ ಪಾಠವನ್ನು ಚೆನ್ನಾಗಿ ಕಲಿಯುತ್ತೇನೆ" ಎಂಬ ಧನಾತ್ಮಕ ಮತ್ತು ದೃಢ ಮನೋಭಾವವನ್ನು ಇಟ್ಟುಕೊಳ್ಳಬೇಕು

ಅಧ್ಯಯನ ಮಾಡುವ ಮೊದಲು ಮನಸ್ಸನ್ನು ಒತ್ತಡದಿಂದ ಮುಕ್ತಗೊಳಿಸಲು ಪ್ರಯತ್ನಿಸಬೇಕು.

ನೋಡಿದಿರಾ ಸ್ನೇಹಿತರೆ,

ಯಾವುದೇ ಅಭ್ಯಾಸವಾದರೂ ಅಷ್ಟೇ, ಅದನ್ನು ಹಸ್ತಗತ ಮಾಡಿಕೊಳ್ಳುವವರೆಗೆ ಮಾತ್ರ ಅದು ಕಠಿಣ.

ಒಳ್ಳೆಯ ಅಭ್ಯಾಸಗಳು ನಮ್ಮನ್ನು ಮಾನಸಿಕವಾಗಿ ದೈಹಿಕವಾಗಿ ಶಕ್ತಿಶಾಲಿಯನ್ನಾಗಿಸುತ್ತದೆ. ನಾವು ಮನಸ್ಸು ಮಾಡಬೇಕಷ್ಟೆ.

**-ವೀಣಾ ಹೇಮಂತ್ ಗೌಡ ಪಾಟೀಲ್, ಮುಂಡರಗಿ, ಗದಗ್**

# ವನ ಭೋಜನದಿಂದ ಸಂಬಂಧ ಬೆಸೆಯುತ್ತವೆ: ಚಂದ್ರಕಾಂತ



**ಬೀದರ:ನ.6–**ವ್ಯಕ್ತಿಗಳ ಬದುಕು ಭೌತಿಕವಾಗಿ ಬೆಳೆದಿದ್ದರೂ ಹೃದಯವಂತಿಕೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಭೋಜನ ಕೂಟ ವನ ಭೋಜನಗಳು ಸಂಬಂಧ ಬೆಸೆಯಲು ಅತ್ಯಂತ ಪ್ರಯೋಜನ ಎಂದು ನಿವೃತ್ತ ಪ್ರಾಚಾರ್ಯರಾದ ಪ್ರೊ. ಚಂದ್ರಕಾಂತ ಬಿರಾದಾರ ನುಡಿದರು.

ವಚನ ಚಾರಿಟೇಬಲ್ ಸೊಸೈಟಿ ಹಾಗೂ ವಚನಾನುಭವ ವೇದಿಕೆಅರ್ವತ್ತು ಕುಟುಂಬಗಳ ಸದಸ್ಯರು ಘಾಟಬೋರಳ ಸಮೀಪದ ಶಂಕರಲಿಂಗ ಪವಿತ್ರವಾದ ಪರಿಸರ ತಾಣದಲ್ಲಿ ವನ ಭೋಜನದಲ್ಲಿ ಪ್ರೋ. ಚಂದ್ರಕಾಂತ ಬಿರಾದಾರ ಮುಖ್ಯ ಅತಿಥಿಗಳಾಗಿ. ಇಂದು ಪ್ರತಿಯೊಬ್ಬರೂ ಮೊಬೈಲ್ ನಲ್ಲಿ ಬೆರೆತು ಆತ್ಮೀಯ ಬಂಧುತ್ವ/ಸಂಭಂಧ ಮಾಯವಾಗ ತೊಡಗಿದೆ. ಇದರಿಂದ ಸಮುದಾಯಕ್ಕೆ ಹೊಡೆತ. ನಾವೆಲ್ಲರೂ ಒಬ್ಬರನೊ ಬ್ಬರು ಅರಿತು ಒಂದೆಡೆ ಸೇರಿಕೊಂಡು ಭಾವನೆಗಳನ್ನು ಹಂಚಿಕೊ ಳ್ಳಲು ಇದು ಪೂರಕವಾಗಲಿದೆ.

ಯಾಂತ್ರಿಕವಾದ ಧಾವಂತದ ಬದುಕಿನಲ್ಲಿ ಯಾರಿಗೂ ಸಮಯ ವಿಲ್ಲ ಆದರೆ ಮಾಡುವುದಂತು ಏನೇನು ಇಲ್ಲ. ವಚನ ಚಾರಿಟೇಬ ಲ್ ಸೊಸೈಟಿ ಒಂದು ತಾತ್ವಿಕ ಸಮುದಾಯ ನಿರ್ಮಾಣ ಮಾಡಲು ಕಳೆದ ಐದು ವರ್ಷಗಳಿಂದ ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತನ್ನನ್ನೆ ತಾನು ತೊಡಗಿಸಿಕೊಂಡು ಮುನ್ನಡೆಯುತ್ತಿರುವುದು ಶ್ಲಾಘನೀಯ. ಅಲ್ಲಮಪ್ರಭು ನಾವದಗೇರೆ ಹಾಗೂ ಶಿವಕುಮಾರ ಸಾಲಿ ಅನೇಕ ಸಂಕಷ್ಟ ಗಳ ಸರ ಮಾಲೆಯಲ್ಲೂ ವಿಚಲಿತರಾಗದೆ ಮಾಡುವ ಕೆಲಸ ಎಲ್ಲರನ್ನು ಮಂತ್ರ ಮುಗ್ಧಗೊಳಿಸಿದೆ ಎಂದರು.

ಡಾ ಸತ್ಯಕ್ಕ ಟೋಕರೆ ಮುಖ್ಯ ಅತಿಥಿಗಳಾಗಿ ಮಾಡುವಲ್ಲಿ ನಿಷಾಮ ಮನಸ್ಸಿದ್ದರೆ ಎಂಥ ಕೆಲಸಗಳು ಸರಳವಾಗಿ ಬಿಡುತ್ತವೆ. ಪ್ರತಿ ಕುಟುಂಬದ ಸದಸ್ಯರ ಆಲೋಚನೆ ಬೇರೆ ಬೇರೆ ಇರಲಿ ಆದರೆ ಒಂದೆಡೆ ಕೂಡಿಕೊಂಡು ಚಿಂತನೆ ಮಾಡಿದರೆ ಏನಾದರೊಂದು ವಿಚಾರ ಹೊರಹೊಮ್ಮಲು ಸಾಧ್ಯ. ಸಾಮೂಹಿಕ ವಾದ ಭಾವನೆಯಿಂದ ಬೃಹತ್ ಕಾರ್ಯಕ್ಕೆ ಇದು ಪ್ರೇರಣೆ. ಇಷ್ಟು ವರ್ಷಗಳ ಕಾಲ ಬೀದರನಲ್ಲಿದ್ದರೂ ಇಂಥ ಪವಿತ್ರ ವೈಚಾರಿಕ ಪರಿಸರ ತಾಣ ಗಮನಕ್ಕೆ ಬಂದಿಲ್ಲ ಆದರೆ ವನ ಭೋಜನ ಎಂಬ ಕಾರ್ಯದಿಂದ ನೂರು ಕುಟುಂಬದವರು ಇದರ ಮಹಿಮೆ ಅರಿಯಲು ಇಂದು ಸಾಕಾರವಾಯಿತು ಎಂದು ನುಡಿದರು.

ದಿವ್ಯ ಸಾನಿಧ್ಯ ವಹಿಸಿದ ರಾಜೋಳ ಆಶ್ರಮದ ಯೋಗ ಗುರುಗ ಳಾದ ಪೂಜ್ಯ ಶ್ರೀ ಲೋಕೇಶ ಗುರುಜಿ ಆಶೀರ್ವಚನ ನೀಡುತ್ತ ಶಂಕರ ದಾಸಿಮಯ್ಯ ಶರಣರು ಹನ್ನೆರಡನೆ ಶತಮಾನದವರು, ಅವರು ಇಲ್ಲಿ ಧ್ಯಾನ, ತಪಸ್ಸು ಮಾಡಿರುವ ಸ್ಥಳ, ಹೀಗಾಗಿ ಇದು ಅತ್ಯಂತ ಪವಿತ್ರ ಜೊತೆಗೆ ಪರಿಸರ ತಾಣ. ಇದು ಶಿವಯೋಗ ಸಾಧನೆಗೆ ಒಳ್ಳೆ ಸ್ಥಾನ. ಸಮಾನ ಮನಸ್ಕರಾ ದವರು ಒಂದೆಡೆ ಸೇರಿ ವನ ಭೋಜನ, ಪ್ರಾರ್ಥನೆ, ಭಜನೆ, ಗೋಷ್ಠಿ ಮಾಡುವುದರಿಂದ ಎಲ್ಲರ ಮನಸ್ಥಿತಿ ಬದಲಾವಣೆ ಆಗುತ್ತವೆ. ವಿಸ್ಮಯ ಜಗತ್ತಿನಲ್ಲಿ ದುಗುಡ, ದುಮ್ಮಾನ, ಕಷ್ಟ ಸಹಜ. ಸಕರಾತ್ಮವಾದ ಚಿಂತನೆ ಒಂದೆಡೆ ನೆಲೆಗೊಂಡರೆ ಜೀವನ ಸಮೃದ್ಧಿಗೊಳಿಸಿಕೊಳ್ಳಲು ಸಾಧ್ಯ ಎಂದರು.

# ಅಕ್ರಮವಾಗಿ ಸಾಗಿಸುತ್ತಿದ್ದ ಗೋವುಗಳ ರಕ್ಷಣೆ

**ಕಲಬುರಗಿ,ನ.6:** ಗೂಡ್ಸ್ ವಾಹನಗಳಲ್ಲಿ ಅಕ್ರಮವಾಗಿದ್ದ ಸಾಗಿಸುತ್ತಿದ್ದ ಗೋವು ಮತ್ತು ಕರುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನಗರದ ರಿಂಗ್ ರಸ್ತೆ ಅಫಜಲಪುರ ಕ್ರಾಸ್ ಹತ್ತಿರ ಎರಡು ಗೂಡ್ಸ್ ವಾಹನಗಳಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 10 ಹಸುಕರುಗಳನ್ನು ನಗರದ ಅಶೋಕ ನಗರ ಠಾಣೆ ಪೊಲೀಸರು ರಕ್ಷಿಸಿದ್ದಾರೆ.ಘಟನೆಯಲ್ಲಿ ವಾಹನಗಳ ಚಾಲಕರು ವಾಹನಗಳನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ.ವಾಹನದ ಮಾಲೀಕರು ಮತ್ತು ಚಾಲಕರ ವಿರುದ್ಧ ಪ್ರಕರಣ ದಾಖಲಾಗಿದ್ದು, ಜಾನುವಾರುಗಳನ್ನು ಸ್ಥಳೀಯ ಗೋಶಾಲೆಗೆ ಸೇರಿಸಲಾಗಿದೆ



ಯುವ ಮಾರ್ಗ



## ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನ

**ರಾಯಚೂರು,ನ.6–**ಕರ್ನಾಟಕ ಮಿದುಳಿನ ಆರೋಗ್ಯ ಉಪಕ್ರಮ (ಕೆ.ಎ.ಬಿ.ಹೆಚ್.ಐ) ಕಾರ್ಯಕ್ರಮದಡಿ ಸಾರ್ವಜನಿಕ ಹಿತದೃಷ್ಠಿಯಿಂದ ಗುತ್ತಿಗೆ ಆಧಾರದ ಮೇಲೆ ಖಾಲಿಯಿರುವ ಎರಡು ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.ಸ್ಪೀಚ್ ಥೆರಪಿಸ್ಟ್ (ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲೋಜಿಸ್ಟ್) 01 ಹುದ್ದೆಗೆ ಬ್ಯಾಚುಲರ್ ಇನ್ ಆಡಿಯೋಲಾಜಿ ಮತ್ತು ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲೋಜಿ ವಿದ್ಯಾರ್ಹತೆ ಹೊಂದಿರಬೇಕು. ಅಲ್ಲದೆ ಅರ್ಜಿದಾರರು ಸರಳವಾಗಿ ಕನ್ನಡ ಭಾಷೆಯನ್ನು ಓದುವುದು, ಬರೆಯುವುದು ಮತ್ತು ಮಾತನಾಡಬೇಕು. ನ್ಯೂರಾಲಾಜಿಕಲ್ ಡಿಸ್ ಆರ್ಡರ್ ರೋಗಿಗಳ ಮೌಲ್ಯಮಾಪನ ಹಾಗೂ ಸಮಾಲೋಚನೆಯಲ್ಲಿ ಒಂದು ವರ್ಷದ ಅನುಭವ ಇರುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ವಯೋಮಿತಿ 45 ವರ್ಷದೊಳಗಿರಬೇಕು. 30 ಸಾವಿರ ರೂ.ಗಳ ಮಾಸಿಕ ಸಂಭಾವನೆ ನೀಡಲಾಗುವುದು.ಕ್ಲಿನಿಕಲ್ ಸೈಕಾಲಜಿಸ್ಟ್–01 ಹುದ್ದೆಗೆ ಎಂ.ಫಿಲ್ ಇನ್ ಮೆಂಟಲ್ ಹೇಲ್ಥ್ ಮತ್ತು ಸೋಷಿಯಲ್ ಸೈಕಾಲೋಜಿ ಪದವಿಯಲ್ಲಿ 2 ವರ್ಷಗಳ ಪೂರ್ಣಾವಧಿ ಕೋರ್ಸ್ (ರೆಗುಲರ್) ಪೂರ್ಣಗೊಳಿಸಿದ ನಂತರ ಆರ್.ಸಿ.ಐ ನಿಂದ ಅನುಮೋದಿಸಲ್ಪಟ್ಟ ಮತ್ತು ಗುರುತಿಸಲ್ಪಟ್ಟ ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಮನೋವೈಜ್ಞಾನದಲ್ಲಿ ತರಬೇತಿ ಹೊಂದಿರಬೇಕು. (ಅಥವಾ) ಸೈಕಾಲೋಜಿ/ ಅಪ್ಲೈಡ್ ಸೈಕಾಲೋಜಿ/ ಮೆಡಿಕಲ್ ಮತ್ತು ಸೋಷಿಯಲ್ ಸೈಕಾಲೋಜಿಯಲ್ಲಿ ಸ್ನಾತಕೊತ್ತರ ಪದವಿ ಹೊಂದಿರಬೇಕು. ಹಾಗೂ ಅರ್ಜಿದಾರರು ಸರಳವಾಗಿ ಕನ್ನಡ ಭಾಷೆಯನ್ನು ಓದುವುದು, ಬರೆಯುವುದು ಮತ್ತು ಮಾತನಾಡಬೇಕು. ನ್ಯೂರಾಲಾಜಿಕಲ್ ಡಿಸ್ ಆರ್ಡರ್ ರೋಗಿಗಳ ಮೌಲ್ಯಮಾಪನ ಹಾಗೂ ಸಮಾಲೋಚನೆಯಲ್ಲಿ ಒಂದು ವರ್ಷದ ಅನುಭವ ಇರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು 45 ವರ್ಷದೊಳಗಿರಬೇಕು. 26,250 ರೂ.ಗಳನ್ನು ಮಾಸಿಕ ಸಂಭಾವನೆ ನೀಡಲಾಗುವುದು.ಈ ಎರಡು ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಭರ್ತಿ ಮಾಡಲು ನವೆಂಬರ್ 12ರ ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಗಳ ಕಚೇರಿ, ಜಿಲ್ಲಾ ಕುಷ್ಠರೋಗ ನಿವಾರಣ ಅಧಿಕಾರಿಗಳ ಕಾರ್ಯಾಲಯ ವಿಭಾಗ ರಾಯಚೂರು ಇಲ್ಲಿ ನೇರ ಸಂದರ್ಶನ ನಡೆಯಲಿದೆ.ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 8151896578ಗೆ ಸಂಪರ್ಕ ಮಾಡಬಹುದಾಗಿದೆ. ಅಥವಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಾಲಯ ವಿಭಾಗಕ್ಕೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅರ್ಜಿ ಆಹ್ವಾನ: ಅವಧಿ ವಿಸ್ತರಣೆ

**ರಾಯಚೂರು,ನ.6–**ಇಲ್ಲಿನ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ 2025–26ನೇ ಸಾಲಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ನವೆಂಬರ್ 15 ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.ಇಲಾಖೆಯಿಂದ ಆಧಾರ್ ಯೋಜನೆ, ವೈದ್ಯಕೀಯ ಪರಿಹಾರ ನಿಧಿ ಯೋಜನೆ, ಪ್ರತಿಭಾವಚಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಯೋಜನೆ, ನಿರುದ್ಯೋಗ ಭತ್ಯೆ ಯೋಜನೆ, ಶಿಶುಪಾಲನೆ ಭತ್ಯ ಯೋಜನೆ, ಮರಣ ಪರಿಹಾರ ನಿಧಿ ಯೋಜನೆ, ಪ್ರತಿಭೆ ಯೋಜನೆ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ, ದೃಷ್ಟಿದೋಷ ಹೊಂದಿದ ವಿಕಲಚೇತನರಿಗೆ ಬ್ರೈಲ್ ಕಿಟ್ ಯೋಜನೆ, ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ, ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ ಯೋಜನೆ, ಸಾಧನೆ–ಸಲಕರಣೆ ಯೋಜನೆ ಹಾಗೂ ವಿಕಲಚೇತನರಿಗೆ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಯೋಜನೆಯಡಿ ಸೌಲಭ್ಯ ಒದಗಿಸಲಾಗುತ್ತಿದ್ದು, ಆಸಕ್ತರು ಅರ್ಜಿಯನ್ನು ನವೆಂಬರ್ 15ರೊಳಗಾಗಿ ಫಲಾನುಭವಿಗಳು ಆನ್‌ಲೈನ್ ಸೇವಾ–ಸಿಂಧು ತಂತ್ರಾಂಶದಡಿ ಮೂಲಕ ಗ್ರಾಮ–ಓನ್, ಕರ್ನಾಟಕ–ಓನ್, ಬೆಂಗಳೂರು–ಓನ್ ವಿಳಾಸ: https// sevasindhanur.karnatak.gov.insevasindhu/ Kannada ನಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಎಂ.ಆರ್.ಡಬ್ಲ್ಯು ರಾಯಚೂರು ಅಮರೇಶ ಯಾದವ್ ಮೊಬೈಲ್ ಸಂಖ್ಯೆ: 9972237508, ಮಾನವಿ–ಸಿರವಾರ ರಾಘವೇಂದ್ರ ಮೊಬೈಲ್ ಸಂಖ್ಯೆ: 9740203769, ದೇವದುರ್ಗ ಲೋಕಪ್ಪ ನೂರು ನಾಯ್ಕೆ ಮೊಬೈಲ್ ಸಂಖ್ಯೆ: 9945207693, ಸಿಂಧನೂರು ಬಸವರಾಜ ಸಾಸಲಮರಿ ಮೊಬೈಲ್ ಸಂಖ್ಯೆ: 9900298217, ಲಿಂಗಸ್ಗೂರು–ಮಸ್ಕಿ ನಾಗರಾಜ ಮೊಬೈಲ್ ಸಂಖ್ಯೆ: 9901668380 ಅಥವಾ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಮಾವಿನ ಕೆರೆ ರಸ್ತೆ, ಆಜಾದ ನಗರ, ರಾಯಚೂರು ಜಿಲ್ಲಾ ಕಚೇರಿಗೆ ಕಚೇರಿ ಕೆಲಸದ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ. ಇಲಾಖೆಯ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾದ ಮಾರ್ಗದರ್ಶನವನ್ನು ಈ ಇಲಾಖೆಯ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು, ನಗರ ಪ್ರದೇಶದಲ್ಲಿ ನಗರ ಪುನರ್ವಸತಿ ಕಾರ್ಯಕರ್ತರನ್ನು ಹಾಗೂ ತಾಲ್ಲೂಕು ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಮಾಹಿತಿ ಪಡೆದು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ತಿಳಿಸಿದ್ದಾರೆ.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯ ಮೇಲೆ ಅನ್ಯಾಯ ಎಸಿಗಿರುವ ಅಧಿಕಾರಿಗಳವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹ

**ಯುವ ಮಾರ್ಗ ಸುದ್ದಿ**



**ದೇವದುರ್ಗ,ನ.6–** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯ ಮೇಲೆ ಅನ್ಯಾಯ ಎಸಗಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮಜರಗಿಸಬೇಕೆಂದು ಯೇಸು ಡಿಕೆ ಬಹು ಜನ ಸಮಾಜ ಪಕ್ಷದ ತಾಲೂಕು ಅಧ್ಯಕ್ಷರು ಇವರು ತಹಶೀಲ್ದಾರರು ದೇವದುರ್ಗ ಇವರ ಮುಖಾಂತರ ಜಿಲ್ಲಾಧಿಕಾ ರಿಗಳಿಗೆ ಮನವಿಯನ್ನು ಸಲ್ಲಿಸಿದರು

ಜಾಲಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರ ಒಂದರಲ್ಲಿ ಎಸ್ಸಿ ಮಹಿಳೆ ನರಸಮ್ಮ ಗಂಡ ಬಸವರಾಜ ಅವರನ್ನು ಅಡಿಗೆ ಸಾಹಾಯಕಿ ಹುದ್ದೆಯಲ್ಲಿ ಸುಮಾರು 30 ತಿಂಗಳು ಕಾಲ ಪುಕ್ಕಟ್ಟೆಯಾಗಿ ದುಡಿಸಿಕೊಂಡು ಎಸ್ಸಿ ಮಹಿಳೆಗೆ ಅನ್ಯಾಯ ಮಾಡಲಾಗಿದೆ ಸಹಾಯಕಿ ಕೆಲಸವನ್ನು ಖಾಯಂ ಗೊಳಿಸುವುದಾಗಿ ನಂಬಿಸಿ ಮೋಸ ಮಾಡಲಾಗಿರುತ್ತದೆ

ಯಾವುದೇ ಮಹಿಳೆಗೆ ಅನ್ಯಾಯವಾದರೂ ನ್ಯಾಯ ಕೊಡಿಸಬೇಕಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈ ರೀತಿ ಮಾಡಿರೋದು ಆತಂಕ ಕಾರಿ ವಿಷಯವಾಗಿದೆ ಇಲ್ಲಿ ಕೆಲಸ ಮಾಡಿಸಿಕೊಂಡು ಏಕಾ ಏಕಿ ಆ ಹುದ್ದೆಯ ಸ್ಥಳಕ್ಕೆ ಸುಳ್ಳು ದಾಖಲೆಗಳನ್ನು ಹೊಂದಿರುವ ಈರಮ್ಮ ಎಂಬ ಮಹಿಳೆಯ ದಾಖಲಾತಿಗಳನ್ನು ತೆಗೆದುಕೊಂಡು ಸರಿಯಾಗಿ ಪರಿಶೀಲನೆ ಮಾಡದೆ ಅಡಿಗೆ ಸಾಹಾಯಕಿ ಹುದ್ದೆಯನ್ನು ಅಕ್ರಮವಾಗಿ ನೀಡಲಾಗಿದೆ ಕಾರಣ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಈಡೇರಿಸಬೇಕೆಂದು ತಮ್ಮಲ್ಲಿ ಬಹುಜನ ಪಾರ್ಟಿ ಒತ್ತಾಯಿಸುತ್ತದೆ.

ಎಸ್ ಟಿ ಮಹಿಳೆಯನ್ನು 30 ತಿಂಗಳು ಕಾಲ ಸಂಬಳ ನೀಡದೆ ಅಡಿಗೆ ಸಹಾಯಕಿ ಹುದ್ದೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು 30 ತಿಂಗಳ ಜಾಲಹಳ್ಳಿ ಅಂಗನವಾಡಿ ಕೇಂದ್ರ 1 ಅಡಿಗೆ ಸಹಾಯಕಿ ಹುದ್ದೆಯಲ್ಲಿ ಕೆಲಸ ಮಾಡಿದ ನರ್ಸಮ್ಮ ಗಂಡ . ಬಸವರಾಜ ಹುದ್ದೆ ಕಾಯಂಗೊಳಿಸಿ ನ್ಯಾಯ ಕೊಡಿಸಬೇಕು,

ಅಂಗನವಾಡಿ ಸಹಾಯಕಿ ಹುದ್ದೆಗೆ ಸುಳ್ಳು ವಾಸ ಸ್ಥಳ ನೀಡಿದ ಕಂದಾಯ ಅಧಿಕಾರಿ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು.

ಜಾಲಹಳ್ಳಿ ಅಂಗನವಾಡಿ ಕೇಂದ್ರ ಒಂದರಲ್ಲಿ ಸುಳ್ಳು ದಾಖಲೆ ಸಲ್ಲಿಸಿ ಅಂಗನವಾಡಿ ಸಹಾಯಕಿ ಹುದ್ದೆಯಲ್ಲಿ ನೇಮಕ ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಜರಗಿಸಿ ನೇಮಕಾತಿಯನ್ನು ರದ್ದುಗೊಳಿಸಬೇಕು, ಈದೆ ಸಂದರ್ಭದಲ್ಲಿ. ಒ.ಖ ಬೇರಿ ಜಿಲ್ಲಾ ಸಂಯೋಜಕರು ರಾಯಚೂರು. ಎಲ್ಲಪ್ಪ ಕಾಕರಗಲ್ ವಕೀಲರು ತಾಲೂಕು ಪ್ರಧಾನ ಕಾರ್ಯದರ್ಶಿಗಳು ದೇವದುರ್ಗ. ಬಿ ವೆಂಕನಗೌಡ ವಕೀಲರು ರಾಜ್ಯ ಕಾನೂನು ಘಟಕ ಸಂಯೋಜಕರು. ಶಿವಪ್ಪ ಬಲ್ಲಿದವ ಜಿಲ್ಲಾ ಉಸ್ತುವಾರಿಗಳು. ಅಮರೇಶ ಭವಾನಿ. ಎಂ ಆರ್ ಬಸವ ಬಿ ಆರ್ ಗುಂಡ. ನರಸನಗೌಡ ನಾಯಕ. ಇನ್ನು ಮುಂತಾದವರು ಭಾಗವಹಿಸಿದ್ದರು

## ಚಿಲ್ಲರೆ ಕೇಳುವ ಹಾಗೂ ಲಗ್ನ ಪತ್ರಿಕೆ ನೀಡುವ ನೆಪದಲ್ಲಿ ಎರಡು ಕಡೆ ದರೋಡೆ



**ಬೆಂಗಳೂರು,ನ.6–**ಚಿಲ್ಲರೆ ಕೇಳುವ ನೆಪದಲ್ಲಿ ಹಾಲಿನ ವ್ಯಾಪಾರಿಯ ಗಮನ ಸೆಳೆದು ಹಣ ಎಗರಿಸಿ ಪರಾರಿಯಾಗಿದ್ದ ಆರೋಪಿಯನ್ನು ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಬಂಧಿಸಿ 20 ಸಾವಿರ ಹಣ ವಶಪಡಿಸಿಕೊಂಡಿದ್ದಾರೆ. ಮನೆಗಳಿಗೆ ಹಾಗೂ ಅಂಗಡಿಗಳಿಗೆ ಹಾಲನ್ನು ಮಾರಾಟ ಮಾಡುವ ವ್ಯಾಪಾರಿ ಹನುಮಂತಯ್ಯ ಎಂಬುವರು ಮಾರಾಟದಿಂದ ಬಂದಿದ್ದ 20 ಸಾವಿರ ಹಣವನ್ನು ಜೇಬಿನಲ್ಲಿಟ್ಟುಕೊಂಡು ಸುಬ್ರಹ್ಮಣ್ಯನಗರದ ಬ್ಯಾಂಕ್‌ವೊಂದರ ಬಳಿ ಆಟೋಗಾಗಿ ಕಾಯುತ್ತಿದ್ದರು.

ಆ ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ ದರೋಡೆಕೋರ ಬಂದು 500 ರೂ.ಗೆ ಚಿಲ್ಲರೆ ಕೊಡಿ ಎಂದು ಕೇಳಿದ್ದಾನೆ. ಆಗ ಹಾಲಿನ ವ್ಯಾಪಾರಿ ಜೈಲಿನಲ್ಲಿದ್ದ 20 ಸಾವಿರ ಹಣವಿದ್ದ ಕಂತೆಯನ್ನು ತೆಗೆದು ಚಿಲ್ಲರೆ ಕೊಡುತ್ತಿದ್ದಾಗ, ದುಡ್ಡನ್ನು ಹೀಗೆ ಇಟ್ಟಿದ್ದೀರಲಾ ಸರಿಯಾಗಿ ಜೋಡಿಸಿಕೊಡುತ್ತೆ?ನೆ ಎಂದು ಹೇಳಿ ನೋಟಿನ ಕಂತೆಯನ್ನು ಪಡೆದುಕೊಂಡು ಜೋಡಿಸುವ ರೀತಿ ನಟಿಸಿ ಅವರ ಗಮನ ಬೇರೆಡೆ ಸೆಳೆದು ಹಣದೊಂದಿಗೆ ಪರಾರಿಯಾಗಿದ್ದಾನೆ.

ಸಹಾಯಕ್ಕಾಗಿ ಹಾಲಿನ ವ್ಯಾಪಾರಿ ಕೂಗಿಕೊಳ್ಳುವಷ್ಟರಲ್ಲಿ ದರೋಡೆಕೋರ ಕಣರೆಯಾಗಿದ್ದ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಘಟನಾ ಸ್ಥಳದಲ್ಲಿನ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿಸಿ ಕ್ಯಾಮೆರಾ ಪರಿಶೀಲಿಸಿ ದ್ವಿಚಕ್ರ ವಾಹನದ ನಂಬರ್ ಪತ್ತೆಹಚ್ಚಿ ಆರೋಪಿ ಮೊಹಮದ್ ಸಿಖಂದರ್(52) ಎಂಬಾತನನ್ನು ಪಾದರಾಯನಪುರದಲ್ಲಿ ಬಂಧಿಸಿ 20 ಸಾವಿರ ಹಣವನ್ನು ವಶಕ್ಕೆ ಪಡೆದುಕೊಂಡು, ಠಾಣೆಗೆ ಕರೆದೊಯ್ದು ನೋಟೀಸ್? ಜಾರಿ ಮಾಡಿ ಕಳುಹಿಸಿದ್ದಾರೆ. ಈ ಪ್ರಕರಣವನ್ನು ಇನ್‌ಸ್ಪೆಕ್ಟರ್ ಸುರೇಶ್ ಹಾಗೂ ಸಿಬ್ಬಂದಿ ತಂಡ ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದೆ.

**ಆನೇಕಲ್ ವರದಿ:** ಲಗ್ನಪತ್ರಿಕೆ ನೀಡುವ ನೆಪದಲ್ಲಿ ಬಂದ ಮಹಿಳೆಯೊಬ್ಬಳು ಒಂಟಿ ಮನೆ ಒಡತಿಗೆ ಕತ್ತಿ ಹಿಡಿದು ಬೆದರಿಸಿ, ಮತ್ತೊಬ್ಬನೊಂದಿಗೆ ಸೇರಿಕೊಂಡು ಚಿನ್ನಾಭರಣ ದರೋಡೆ ಮಾಡಿರುವ ಘಟನೆ ತಾಲ್ಲೂಕಿನ ನೆರಳೂರು ಗ್ರಾಮದಲ್ಲಿ ನಡೆದಿದೆ.

ನೆರಳೂರು ಗ್ರಾಮದ ಹೊರವಲಯದಲ್ಲಿ ವಾಸವಾಗಿರುವ ನಾಗವೇಣಿ ರವಿಕುಮಾರ್ ಎಂಬುವರ ಮನೆಗೆ ನಿನ್ನೆ ಮಧ್ಯಾಹ್ನ 2.30ರ ಸುಮಾರಿನಲ್ಲಿ ಅಪರಿಚಿತ ಮಹಿಳೆಯೊಬ್ಬಳು ಆಗಮಿಸಿ ಬಾಗಿಲು ಬಡಿದು, ಲಗ್ನಪತ್ರಿಕೆ ನೀಡಬೇಕು ಎಂದು ಹೇಳಿದ್ದಾಳೆ.

ದೂರದ ಸಂಬಂಧಿಗಳಿರಬಹುದು ಎಂದು ಭಾವಿಸಿದ ಮನೆಯೊಡತಿ ನಾಗವೇಣಿ ಬಾಗಿಲು ತೆರೆದು ಆಕೆಯನ್ನು ಒಳಗೆ ಆಹ್ವಾನಿಸಿದ್ದಾರೆ. ಮನೆಯೊಳಗೆ ಬಂದ ಆಕೆ ಕುರ್ಚಿಯ ಮೇಲೆ ಕುಳಿತುಕೊಂಡು ಕುಡಿಯಲು ನೀರು ಕೇಳಿದ್ದಾಳೆ. ನಾಗವೇಣಿ ಅವರು ನೀರು ತರಲು ಅಡುಗೆ ಮನೆಗೆ ತೆರಳುತ್ತಿದ್ದಾಗಲೇ, ಆಕೆ ದಿಢೀರನೆ ಎದ್ದು ಹಿಂಬಾಲಿಸಿಕೊಂಡು ಹೋಗಿ ನಾಗವೇಣಿಯ ಬಾಯಿಯನ್ನು ಭದ್ರವಾಗಿ ಮುಚ್ಚಿ ಕಿರುಚದಂತೆ ಕುತ್ತಿಗೆಗೆ ಕತ್ತಿ ಹಿಡಿದು ಬೆದರಿಸಿದ್ದಾಳೆ.

ಬಳಿಕ ಕೆಲವೇ ನಿಮಿಷಗಳಲ್ಲಿ ಮುಸುಕುಧಾರಿಯೊಬ್ಬ ಮನೆಯೊಳಗೆ ಪ್ರವೇಶಿಸಿದ್ದಾನೆ. ಆನಂತರ ಇಬ್ಬರೂ ಸೇರಿಕೊಂಡು ಮನೆಯ ಒಡತಿಯನ್ನು ಕೊಠಡಿಯೊಂದಕ್ಕೆ ಕರೆದುಕೊಂಡು ಹೋಗಿ, ಕುರ್ಚಿಯಲ್ಲಿ ಕೂರಿಸಿ ಅವರ ಕೈಗಳನ್ನು ವೇಲಿನಿಂದ ಬಿಗಿದು ಕಟ್ಟಿಹಾಕಿದ್ದಾರೆ.

ಮನೆಯಲ್ಲಿರುವ ಚಿನ್ನಾಭರಣಗಳು ಎಲ್ಲೆಲ್ಲಿವೆ ಹೇಳು. ಇಲ್ಲದಿದ್ದರೆ ನಿನ್ನನ್ನು ಕೊಲ್ಲುತ್ತೆ?ವೆ ಎಂದು ಕುತ್ತಿಗೆಗೆ ಚಾಕು ಒತ್ತಿ ಹಿಡಿದು ಬೆದರಿಕೆ ಹಾಕಿದ್ದಾರೆ. ಜೀವಭಯದಿಂದ ಹೆದರಿದ ನಾಗವೇಣಿ ಅವರು ಆಭರಣಗಳಿರುವ ಬೀರುಗಳ (ಅಲ್ಮೆರಾಗಳ) ಸ್ಥಳ ಮತ್ತು ಬೀಗದ ಕೀಗಳಿರುವ ಜಾಗವನ್ನು ತಿಳಿಸಿದ್ದಾರೆ.

ಆಗ ಇವರಿಬ್ಬರೂ ಕೈಗೆ ಸಿಕ್ಕ ಎಲ್ಲಾ ಚಿನ್ನಾಭರಣಗಳನ್ನು ದೋಚಿ ಹೊರಬಾಗಿಲಿನ ಚಿಲುಕ ಹಾಕಿಕೊಂಡು ಅಲ್ಲಿಂದ ಪರಾರಿಯಾಗಿದ್ದಾರೆ. ಕೆಲ ನಿಮಿಷದ ಬಳಿಕ ಕೈಗಳನ್ನು ಬಿಡಿಸಿಕೊಂಡು ಹೊರಗೆ ಹೋಗಿ ಸಹಾಯಕ್ಕೆ ಕೂಗಿಕೊಂಡು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ.

ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಡಿವೈಎಸ್ಪಿ ಮೋಹನ್‌ಕುಮಾರ್ ಪರಿಶೀಲನೆ ನಡೆಸಿದ್ದು, ಘಟನೆ ಸಂಬಂಧ ಅತ್ತಿಬೆಲೆ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎರಡು ತಂಡ ರಚನೆ: ಆರೋಪಿಗಳ ಬಂಧನಕ್ಕಾಗಿ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಈ ತಂಡಗಳು ಈಗಾಗಲೇ ಕಾರ್ಯಾಚರಣೆ ಕೈಗೊಂಡು ಹಲವು ಮಾಹಿತಿಗಳನ್ನು ಕಲೆ ಹಾಕುತ್ತಿವೆ.

## ಗಿರಿಜಿಲ್ಲೆಗೆ ರಾಜ್ಯೋತ್ಸವ ಪ್ರಶಸ್ತಿ ಗರಿ ಮುಡಿಸಿದ ಮಲ್ಲಿಕಾರ್ಜುನ : ಶಾಸಕ ತುನ್ನೂರ



**ಯಾದಗಿರಿ,ನ.6–** ತೆರೆಮರೆಯಲ್ಲಿ ಪರಿಸರ ಉಳಿಸಿ, ಬೆಳೆಸಿ ಅಗಾಧ ಸೇವೆ ಮಾಡಿರುವ ತಾಲೂಕಿನ ರಾಮಸಮುದ್ರದ ವನಕಾಯಕ ಜೀವಿ ಮಲ್ಲಿಕಾರ್ಜುನ ನಿಂಗಪ್ಪ ಅವರ ತ್ಯಾಗದ ಶ್ರಮ ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದು ಗಿರಿಜಿಲ್ಲೆಗೆ ತಂದ ಗೌರವ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ಹೇಳಿದರು.

ಶಾಸಕರ ಕಚೇರಿಯಲ್ಲಿ ಪ್ರಶಸ್ತಿ ಪುರಸ್ಕೃತ ಮಲ್ಲಿಕಾರ್ಜನ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ತಾವು ಮಾಡಿದ ಸೇವೆಯನ್ನು ಎಲ್ಲೂ ಹೇಳದೆ ಮತ್ತು ಯಾವುದೇ ಫಲಾಪೇಕ್ಷೆ ಬಯಸದೇ ಇರುವುದರಿಂದಲೇ ಸಾಧಕರನ್ನು ಹುಡುಕಿ ರಾಜ್ಯ ಸರ್ಕಾರ ಕೊಟ್ಟ ಪ್ರಶಸ್ತಿ ಪಟ್ಟಿಯಲ್ಲಿ ನಮ್ಮ ರಾಮಸಮುದ್ರ ವ್ಯಕ್ತಿಯು ಸೇರಿದ್ದು ತುಂಬಾ ಸಂತಸ ತಂದಿದೆ ಎಂದು ಎಂದರು.

## ಸಚಿವ ಎನ್.ಎಸ್.ಬೋಸರಾಜು ರಾಯಚೂರು ಜಿಲ್ಲಾ ಪ್ರವಾಸ

**ರಾಯಚೂರು,ನ.6–**ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು ನವೆಂಬರ್ 7 ಹಾಗೂ 8 ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ನವೆಂಬರ್ 7ರ ಬೆಳಿಗ್ಗೆ 11.30ಕ್ಕೆ ಜಿಲ್ಲೆಯ ಮಾನವಿ ತಾಲೂಕಿನ ಸುಕ್ಷೇತ್ರ ಕರೆಗುಡ್ಡದ ಶ್ರೀಮಹಾಂತೇಶ್ವರ ಸಂಸ್ಥಾನ ಮಠದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುವರು.

ಮಧ್ಯಾಹ್ನ 1.15ಕ್ಕೆ ಮಾನವಿ ಶಾಸಕರೊಂದಿಗೆ ಮಾನವಿ ವಿಧಾನಸಭಾ ಕ್ಷೇತ್ರದ ಬಾಗಲವಾಡ ಮತ್ತು ನಡುಗಡ್ಡೆ ಕ್ಯಾಂಪ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಉದ್ಘಾಟನೆ ಕಾರ್ಯಕ್ರಮಗಳಲ್ಲಿ ಭಾಗಿಯಾಗುವರು.

ಮಧ್ಯಾಹ್ನ 3 ಗಂಟೆಗೆ ರಾಜ್ಯ ಹೆದ್ದಾರಿ–128ಕ್ಕೆ ಸೇರುವ ಕರೇಗುಡ್ಡ ಕ್ರಾಸ್‌ನಿಂದ 76 ವಿತರಣಾ ಕಾಲುವೆಯವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಮಾನವಿ ಶಾಸಕರೊಂದಿಗೆ ಭಾಗಿಯಾಗಿಯಾಗುವರು.

ಸಂಜೆ 4 ಗಂಟೆಗೆ ಮಾನವಿ ಶಾಸಕರೊಂದಿಗೆ ಮಾನವಿ ಪಟ್ಟಣದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ಹಾಗೂ ಉದ್ಘಾಟನೆ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಸಂಜೆ 6 ಗಂಟೆಗೆ ರಾಯಚೂರಿನ ಆಗಮಿಸಿ ವಾಸ್ತವ್ಯ ಹೂಡಲಿದ್ದಾರೆ.

ನವೆಂಬರ್ 8ರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿರುವ ಸಂತಕವಿ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸುವವರು.

ಬೆಳಿಗ್ಗೆ 11 ಗಂಟೆಗೆ ಅತ್ತನೂರು–ಮಾನವಿ ತಾಲ್ಲೂಕಿನ ರಾಷ್ಟೀಯ ಹೆದ್ದಾರಿ–127, ಯರಗೇರಾ (ಅತ್ತನೂರು ಬೊಮ್ಮನಾಳ) ರಸ್ತೆಯವರೆಗೆ ಮರುಡಾಂಬರೀಕರಣ ಕಾಮಗಾರಿಗೆ ಭೂಮಿಪೂಜೆಯಲ್ಲಿ ಭಾಗಿಯಾಗುವರು. ಬೆಳಿಗ್ಗೆ 11.30ಕ್ಕೆ ಮಾನವಿ ವಿಧಾನಸಭಾ ಕ್ಷೇತ್ರದ ಸಿರವಾರ ಪಟ್ಟಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ಹಾಗೂ ಉದ್ಘಾಟನೆ ಕಾರ್ಯಕ್ರಮಗಳಲ್ಲಿ ಮಾನವಿ ಶಾಸಕರೊಂದಿಗೆ ಭಾಗಿಯಾಗುವರು. ಮಧ್ಯಾಹ್ನ 1 ಗಂಟೆಗೆ ಕವಿತಾಳ ಪಟ್ಟಣದ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಹಾಗೂ ಮಾನವಿ ವಿಧಾನಸಭಾ ಕ್ಷೇತ್ರದ ರಾಜ್ಯ ಹೆದ್ದಾರಿ–20 ಕವಿತಾಳದಿಂದ ಬಸ್ಸಾಪೂರುವರೆಗೆ ರಸ್ತೆ ಡಾಂಬರೀಕರಣ ಕಾಮಗಾರಿಗೆ ಭೂಮಿಪೂಜೆ ಕಾರ್ಯಕ್ರಮಗಳಲ್ಲಿ ಮಾನವಿ ಶಾಸಕರೊಂದಿಗೆ ಭಾಗವಹಿಸುವರು.

ಬಳಿಕ ಪೋತ್ನಾಳ, ಸಿಂಧನೂರು ಹಾಗೂ ಗಂಗಾವತಿ ಮಾರ್ಗವಾಗಿ ಹೊಸಪೇಟೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳಾದ ವೀರಭದ್ರ ಹಂಚಿನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನರ ಕ್ಷೇತ್ರದಲ್ಲಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ನ.10 ಕೊನೆಯ ದಿನ

**ರಾಯಚೂರು,ನ.6–** ಇಲ್ಲಿನ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ 2025ನೇ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧನೆ ಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ ಶಿಕ್ಷಕರಿಗೆ ರಾಜ್ಯ ಪ್ರಶಸಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ನವೆಂಬರ್ 10 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಅರ್ಜಿ ನಮೂನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಆಜಾದ ನಗರ, ರಾಯಚೂರು ಇವರ ಕಚೇರಿ ದೂರವಾಣಿ ಸಂಖ್ಯೆ:–08532–200992 ಇಲ್ಲಿ ಪಡೆಯಬಹುದಾಗಿದೆ. ತಡವಾಗಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಗರಿ ನದಿಯಲ್ಲಿ ಮುಳುಗಿದ್ದ ಇಬ್ಬರಲ್ಲಿಓರ್ವ ಯುವಕನ ಶವ ಪತ್ತೆ

**ಬಳ್ಳಾರಿ,ನ,6** –ತಾಲೂಕಿನ ಹಗರಿ (ವೇದಾವತಿ) ನದಿಯಲ್ಲಿ ಮೊನ್ನೆ ನ 4 ರಂದು ಈಜಾಡಲು ಹೋಗಿದ್ದ ಇಬ್ಬರು ಯುವಕರು ಮುಳುಗಿ ನಾಪತ್ತೆಯಾಗಿದ್ದರು. ಇಬ್ಬರ ಪೈಕಿ ಓರ್ವ ಯುವಕನ ಶವ ಇಂದು ಪತ್ತೆಯಾಗಿದೆ.

ಪಿ.ಡಿ.ಹಳ್ಳಿ ಠಾಣೆಯ ಪೊಲೀಸರು ತಿಳಿಸಿದ್ದಾರೆ. ವೇದಾವತಿ ನದಿಯಲ್ಲಿ ಬುಧವಾರ ಬೆಳಗ್ಗೆಯಿಂದ ಸಂಜೆವರೆಗೆ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಹಾಗೂ ಎನ್‌ಡಿಆರ್‌ಎಫ್ ತಂಡದ ಸಿಬ್ಬಂದಿ ದಿನವಿಡೀ ಕಾರ್ಯಾಚರಣೆ ನಡೆಸಿದ್ದಾರೆ. ಕೊಚ್ಚಿಹೋಗಿರುವ ಬಾಲಕರಾದ ವಿಷ್ಣುಸಾಯಿ, ಕಿರಣ್ ಪತ್ತೆಯಾಗಿಲ್ಲ. ಶೋಧ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಹಗರಿ ಗ್ರಾಮದ ಕಿರಣ್ (16), ಎಂಟನೇ ತರಗತಿ ಓದುತ್ತಿದ್ದ ವಿಷ್ಣುಸಾಯಿ (14) ಮೊನ್ನೆ ಸಂಜೆ ಈಜಲು ಹೋದಾಗ ನೀರಲ್ಲಿ ಸಿಲುಕಿಕೊಂಡು ಮೇಲೆ ಬರಲಾಗದೆ ಸಾವನ್ನಪ್ಪಿದ್ದರು.

ಮತ್ತೆ ಹುಡುಕಾಟ ನಡೆಸಿದಾಗ ಕಿರಣ್ ಶವ ಪತ್ತೆಯಾಗಿದೆ. ವಿಷ್ಣು ಸಾಯಿ ಶವಕ್ಕಾಗಿ ಹುಡುಕಾಟ ಮುಂದುವರೆದಿದೆ.ಈ ಬಗ್ಗೆ ಪಿಡಿಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಸಗಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H